# ಕರ್ನಾಟಕ ದರ್ಶನ



ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘ

ಬೆಂಗಳೂರು

# ಅರ್ಪಣೆ



**ಕೆನರಾ ಬ್ಯಾಂಕಿನ 116ನೇ ಸಂಸ್ಥಾಪನಾ ವರ್ಷದ**

ಸಂಭ್ರಮಾಚರಣೆಯ ಅಂಗವಾಗಿ

ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘ, ಬೆಂಗಳೂರು

ಹೊರತರುತ್ತಿರುವ ಇ-ಕಿರುಹೊತ್ತಿಗೆ

**'ಕರ್ನಾಟಕ ದರ್ಶನ'**

ನಮ್ಮ ಬ್ಯಾಂಕಿನ ಸಂಸ್ಥಾಪಕರಾದ

ಶ್ರೀ ಅಮ್ಮೆಂಬಳ್ ಸುಬ್ಬರಾವ್ ಪೈ ರವರ

ಚರಣಕಮಲಗಳಿಗೆ ಅರ್ಪಿತ

# ಕರ್ನಾಟಕ ದರ್ಶನ

(ಸಂಗ್ರಹ)

ಎಂ ವೆಂಕಟೇಶ ಶೇಷಾದ್ರಿ
ಕೆ ಜಿ ಸಂಪತ್ ಕುಮಾರ್
ಜೆ ಸೋಮಶೇಖರ್
ಶಿವರಾಜ್ ಎಸ್ ಟಿ
ಕೆ ಭಾರ್ಗವಿ

ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘ
ಬೆಂಗಳೂರು

# 'ಕರ್ನಾಟಕ ದರ್ಶನ'

## ಇ–ಕಿರುಹೊತ್ತಿಗೆ




## ಕೆನರಾ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕಿ
## ಶ್ರೀಮತಿ ಎ ಮಣಿಮೇಖಲೈ ರವರಿಂದ ಲೋಕಾರ್ಪಣೆ



**ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘವು ದಿನಾಂಕ ಜುಲೈ 1, 2021 ರಂದು ಕೆನರಾ ಬ್ಯಾಂಕಿನ 116 ನೇ ಸಂಸ್ಥಾಪನಾ ಸಂಭ್ರಮಾಚರಣೆಯ ಅಂಗವಾಗಿ ಹೊರತಂದ ಇ–ಕಿರುಹೊತ್ತಿಗೆ 'ಕರ್ನಾಟಕ ದರ್ಶನ' ವನ್ನು ಕೆನರಾ ಬ್ಯಾಂಕ್‌ನ ಕಾರ್ಯನಿವಾಹಕ ನಿರ್ದೇಶಕಿ ಶ್ರೀಮತಿ ಎ ಮಣಿಮೇಖಲೈ ರವರು ಬಿಡುಗಡೆ ಮಾಡಿದರು. ಈ ಸುಸಂದರ್ಭದಲ್ಲಿ ಕೆನರಾ ಬ್ಯಾಂಕ್‌ನ ಮುಖ್ಯ ಮಹಾಪ್ರಬಂಧಕರಾದ ಶ್ರೀ ವಿ ರಾಮಚಂದ್ರ , ಮಹಾ ಪ್ರಬಂಧಕರುಗಳಾದ ಶ್ರೀ ಎಂ ಜಿ ಪಂಡಿತ್ ಮತ್ತು ಶ್ರೀ ಬಿ ಸುಧಾಕರ್ ಕೊಠಾರಿಯವರು ಉಪಸ್ಥಿತರಿದ್ದರು.**

# ಶುಭ ಹಾರೈಕೆ



ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘವು ಸುಮಾರು ನಾಲ್ಕು ದಶಕಗಳಿಂದಲೂ ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಗಮನದಲ್ಲಿಟ್ಟುಕೊಂಡು ಅನೇಕ ಸೃಜನಾತ್ಮಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಇದರ ಜೊತೆಗೆ ಸಂಘವು 'ಮಕರಂದ', 'ಧನ್ಯವಾಗಲಿ ಬದುಕು', 'ಸ್ವಸಹಾಯ ಸಂಘಗಳು–ಪ್ರಶ್ನೆ ಮತ್ತು ಪರಿಹಾರ', 'ಕರ್ನಾಟಕ ರಸಪ್ರಶ್ನೆಗಳು', 'ಜೇನುಗೂಡು' ಮತ್ತು 'ವಾರಕ್ಕೊಂದು ಕಗ್ಗ' ಎಂಬ ಕೃತಿಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.


ಕೆನರಾ ಬ್ಯಾಂಕ್‌ನ 116 ನೇ ಸಂಸ್ಥಾಪನಾ ದಿನಾಚರಣೆಯ ಶುಭದಿನದಂದು ಸಂಘದ ಏಳನೇ ಕೃತಿಯಾದ 'ಕರ್ನಾಟಕ ದರ್ಶನ' ಇ–ಪುಸ್ತಕವನ್ನು ಪ್ರಕಟಿಸುತ್ತಿರುವುದು ನಿಜಕ್ಕೂ ಅವಿಸ್ಮರಣೀಯ ಮತ್ತು ಸ್ತುತ್ಯಾರ್ಹವಾದ ಕಾರ್ಯವಾಗಿದೆ.

ಸಂಘವು ಹೊರತರುತ್ತಿರುವ 'ಕರ್ನಾಟಕ ದರ್ಶನ' ಇ–ಕೃತಿಯು ಎಲ್ಲಾ ಓದುಗರ ಮನಸೂರೆಗೊಂಡು, ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘವು ಇನ್ನೂ ಹೆಚ್ಚಿನ ಸಾಧನೆಗಳ ಮೈಲುಗಲ್ಲು ತಲುಪಲಿ ಎಂದು ಶುಭ ಹಾರೈಸುತ್ತೇನೆ.

ಜುಲೈ 1, 2021

**ವಿ ರಾಮಚಂದ್ರ**
ಮುಖ್ಯ ಮಹಾ ಪ್ರಬಂಧಕರು,
ಕೆನರಾ ಬ್ಯಾಂಕ್ ಹಾಗೂ ಅಧ್ಯಕ್ಷರು,
ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘ, ಬೆಂಗಳೂರ

# ಶುಭ ಹಾರೈಕೆ



ಕೆನರಾ ಬ್ಯಾಂಕ್ ಉದ್ಯೋಗಿಗಳ ಕನ್ನಡ ಸಂಘವು ಅನೇಕಾನೇಕ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ನಾಡಿನ ಸಾಹಿತ್ಯ ಪರಂಪರೆ ಹಾಗೂ ಸಂಸ್ಕೃತಿಗೆ ಕಿರುಕಾಣಿಕೆಯನ್ನೀಯುತ್ತ ಬಂದಿರುವುದು ಗಮನಾರ್ಹ ವಿಷಯ. ಇದುವರೆಗೆ ಸಂಘವು ಆರು ಪುಸ್ತಕಗಳನ್ನು ಪ್ರಕಟಿಸಿ ಆ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.

ಸಂಘದ ಪ್ರಗತಿಗಾಗಿ ಶ್ರಮಿಸುತ್ತಿರುವ ಎಲ್ಲಾ ಸದಸ್ಯರನ್ನು ಅಭಿನಂದಿಸುತ್ತಾ, ಕೆನರಾ ಬ್ಯಾಂಕ್ 116ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಶುಭಸಂದರ್ಭದಲ್ಲಿ ಸಂಘವು ಹೊರತರುತ್ತಿರುವ 'ಕರ್ನಾಟಕ ದರ್ಶನ' ಇ–ಪುಸ್ತಕಕ್ಕೆ ಸಹೃದಯ ಓದುಗರ ಉತ್ತಮ ಪ್ರೋತ್ಸಾಹ ಮತ್ತು ಸಹಕಾರ ದೊರೆತು ಯಶಸ್ವಿಯಾಗಲಿ ಎಂದು ಶುಭಹಾರೈಸುತ್ತೇನೆ.

**ಎಂ ಜಿ ಪಂಡಿತ್**
ಮಹಾ ಪ್ರಬಂಧಕರು,
ಕೆನರಾ ಬ್ಯಾಂಕ್

ಜುಲೈ 1, 2021

# ನಾಡಗೀತೆ

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ ।
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ ।
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ।

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ।

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ,
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ ।

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರರಿಹ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾ ನಂದ ಕಬೀರರ

# ನಾಡಗೀತೆ

ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೇ,
ಡಂಕಣ ಜಕಣರ ನೆಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರರಂಗಾ
ಚೈತನ್ಯ ಪರಮಹಂಸ ವಿವೇಕರ,
ಭಾರತ ಜನನಿಯ ತನುಜಾತೆ !
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ

ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ।

ರಾಷ್ಟ್ರಕವಿ ಕುವೆಂಪು

# ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ।

ರಾಜನ್ಯರಿಪು ಪರಶುರಾಮನಾಳಿದ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರ ವೃಂದದ ನಾಡು ।

ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜವೈ ವಿದ್ವತ್ತೆಗಳ ಕಾಡು ॥

ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವ ಗದುಗಿನ ವೀರ ನಾರಾಯಣನ ಬೀಡು ॥

– ಹುಯಿಲುಗೋಳ ನಾರಾಯಣರಾವ್

# ನಮ್ಮ ಕರ್ನಾಟಕ ರಾಜ್ಯ



| | | |
|---|---|---|
| ರಾಜಧಾನಿ | : | ಬೆಂಗಳೂರು |
| ಭಾಷೆ | : | ಕನ್ನಡ |
| ವಿಸ್ತೀರ್ಣ | : | **191791** ಚದರ ಕಿಮೀ<br>(ಭಾರತದಲ್ಲಿ **6** ನೇ ದೊಡ್ಡ ರಾಜ್ಯ)<br>ಉದ್ದ : **760** ಕಿಮೀ (ಉತ್ತರ–ದಕ್ಷಿಣ)<br>ಅಗಲ : **420** ಕಿಮೀ (ಪೂರ್ವ–ಪಶ್ಚಿಮ) |
| ಜನಸಂಖ್ಯೆ | : | **6,10,95,297**<br>(**2011** ಜನಗಣತಿಯ ಪ್ರಕಾರ **8** ನೇ ದೊಡ್ಡ ರಾಜ್ಯ)<br>ಗಂಡಸರು : **30966657**<br>ಹೆಂಗಸರು : **30128640** |
| ಲಿಂಗಾನುಪಾತ | : | **973** ಹೆಂಗಸರು/**1000** ಗಂಡಸಿಗೆ |
| ಅಕ್ಷರಸ್ಥರು | : | **75.36** % |
| ಗಂಡಸರು | : | **82.47** % |
| ಹೆಂಗಸರು | : | **68.08** % |
| ಜಿಲ್ಲೆಗಳು | : | **31** |
| ಲೋಕಸಭಾ ಸದಸ್ಯರು | : | **28** |
| ರಾಜ್ಯಸಭಾ ಸದಸ್ಯರು | : | **12** |
| ವಿಧಾನಸಭಾ ಸದಸ್ಯರು | : | **224** |

| | | |
|---|---|---|
| ವಿಧಾನ ಪರಿಷತ್ ಸದಸ್ಯರು | : | 75<br>(ವಿಧಾನಸಭೆಯಿಂದ 25<br>ಸ್ಥಳೀಯ ಸಂಸ್ಥೆಗಳಿಂದ 25<br>ಪದವೀಧರರು : 7<br>ಅಧ್ಯಾಪಕರು : 7<br>ನಾಮಾಂಕಿತರು : 11) |
| ಗಡಿ | : | ವಾಯುವ್ಯದಲ್ಲಿ ಗೋವಾ<br>ಉತ್ತರದಲ್ಲಿ ಮಹಾರಾಷ್ಟ್ರ<br>ಪೂರ್ವದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶ<br>ಆಗ್ನೇಯ ತಮಿಳು ನಾಡು<br>ನೈರುತ್ಯ ಕೇರಳ<br>ಪಶ್ಚಿಮ ಅರಬೀಸಮುದ್ರ |
| ಜನಸಂಖ್ಯೆ | : | ಹಿಂದು 83%<br>(ಧರ್ಮಾಧಾರಿತವಾಗಿ)<br>ಮುಸಲ್ಮಾನರು 11<br>ಕ್ರೈಸ್ತರು 4<br>ಇತರರು 2 |
| ವಿಶಾಲ ಕರ್ನಾಟಕ ಸ್ಥಾಪನೆ | : | 1956 |
| ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿದ್ದು | : | 1973 |
| ಲಾಂಛನ | : | ಗಂಡಬೇರುಂಡ |
| ಪಕ್ಷಿ | : | ನೀಲಕಂಠ |
| ಪ್ರಾಣಿ | : | ಆನೆ (ಏಷಿಯನ್) |
| ವೃಕ್ಷ | : | ಶ್ರೀಗಂಧ |
| ಹೂವು | : | ತಾವರೆ (ಕಮಲ) |
| ನಾಡಗೀತೆ | : | ಜಯ ಭಾರತ ಜನನಿಯ ತನುಜಾತೆ |
| ರಾಜ್ಯಪಾಲರು | : | ಶ್ರೀ ವಜುಭಾಯಿ ವಾಲಾ |
| ಮುಖ್ಯಮಂತ್ರಿ | : | ಶ್ರೀ ಬಿ.ಎಸ್. ಯಡಿಯೂರಪ್ಪ |

# ಕರ್ನಾಟಕದ ರಾಜ್ಯಪಾಲರು




| | | |
|---|---|---|
| 1 | ಶ್ರೀ ಜಯಚಾಮರಾಜ ಒಡೆಯರ್ | 1947–1964 |
| 2 | ಶ್ರೀ ಎಸ್. ಎಂ. ಶ್ರೀನಾಗೇಶ್ | 1964–1965 |
| 3 | ಶ್ರೀ ವಿ. ವಿ. ಗಿರಿ | 1965–1967 |
| 4 | ಶ್ರೀ ಜಿ. ಎಸ್. ಪಾಠಕ್ | 1967–1969 |
| 5 | ಶ್ರೀ ಧರ್ಮವೀರ | 1969–1972 |
| 6 | ಶ್ರೀ ಮೋಹನ್‌ಲಾಲ್ ಸುಖಾಡಿಯಾ | 1972–1976 |
| 7 | ಶ್ರೀ ಉಮಾ ಶಂಕರ ದೀಕ್ಷಿತ್ | 1976–1977 |
| 8 | ಶ್ರೀ ಗೋವಿಂದ ನಾರಾಯಣ ಎಂ | 1977–1983 |
| 9 | ಶ್ರೀ ಅಶೋಕನಾಥ್ ಬ್ಯಾನರ್ಜಿ | 1983–1988 |
| 10 | ಶ್ರೀ ಪಿ. ವೆಂಕಟಸುಬ್ಬಯ್ಯ | 1988–1990 |
| 11 | ಶ್ರೀ ಭಾನು ಪ್ರತಾಪ್ ಸಿಂಗ್ | 1990–1991 |
| 12 | ಶ್ರೀ ಖುರ್ಷಿದ್ ಅಲಂ ಖಾನ್ | 1991–1999 |
| 13 | ಶ್ರೀಮತಿ ವಿ. ಎಸ್. ರಮಾದೇವಿ | 1999–2002 |
| 14 | ಶ್ರೀ ಟಿ ಎನ್ ಚತುರ್ವೇದಿ | 2002–2007 |
| 15 | ಶ್ರೀ ರಾಮೇಶ್ವರ್ ಠಾಕೂರ್ | 2007–2009 |
| 16 | ಶ್ರೀ ಹಂಸ್‌ರಾಜ್ ಭಾರದ್ವಾಜ್ | 2009–2014 |
| 17 | ಶ್ರೀ ವಜುಭಾಯಿ ವಾಲಾ | 2014– |

# ಕರ್ನಾಟಕದ ಮುಖ್ಯಮಂತ್ರಿಗಳು

| | | | |
|---|---|---|---|
| 1 | ಶ್ರೀ ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿ | : | 25ನೇ ಅಕ್ಟೋಬರ್ 1947 ರಿಂದ 30ನೇ ಮಾರ್ಚ್ 1952 |
| 2 | ಶ್ರೀ ಕೆಂಗಲ್ ಹನುಮಂತಯ್ಯ | : | 30ನೇ ಮಾರ್ಚ್ 1952 ರಿಂದ 19 ನೇ ಆಗಷ್ಟ್ 1956 |
| 3 | ಶ್ರೀ ಕಡಿದಾಳ್ ಮಂಜಪ್ಪ | : | 19 ನೇ ಆಗಷ್ಟ್ 1956 ರಿಂದ 31ನೇ ಅಕ್ಟೋಬರ್ 1956 |
| 4 | ಶ್ರೀ ಎಸ್. ನಿಜಲಿಂಗಪ್ಪ | : | 1ನೇ ನವೆಂಬರ್ 1956 ರಿಂದ 16ನೇ ಮೇ 1958 |
| | | | 21 ನೇ ಜೂನ್ 1962 ರಿಂದ 28 ನೇ ಮೇ 1968 |
| 5 | ಶ್ರೀ ಬಸಪ್ಪ ದಾನಪ್ಪ ಜತ್ತಿ | : | 16ನೇ ಮೇ 1958 ರಿಂದ 9ನೇ ಮಾರ್ಚ್ 1962 |
| 6 | ಶ್ರೀ ಎಸ್.ಆರ್. ಕಂಠಿ | : | 9ನೇ ಮಾರ್ಚ್ 1962 ರಿಂದ 20ನೇ ಜೂನ್ 1962 |
| 7 | ಶ್ರೀ ವೀರೇಂದ್ರ ಪಾಟೀಲ್ | | 29ನೇ ಮೇ 1968 ರಿಂದ 18ನೇ ಮಾರ್ಚ್ 1971 |
| | | | 30ನೇ ನವೆಂಬರ್ 1989 ರಿಂದ 10ನೇ ಅಕ್ಟೋಬರ್ 1990 |
| 8 | ಶ್ರೀ ಡಿ. ದೇವರಾಜ ಅರಸ್ | : | 20ನೇ ಮಾರ್ಚ್ 1972 ರಿಂದ 31ನೇ ಡಿಸೆಂಬರ್ 1977 |
| | | | 28ನೇ ಫೆಬ್ರವರಿ 1978 ರಿಂದ 7ನೇ ಜನವರಿ 1980 |
| 9 | ಶ್ರೀ ಆರ್. ಗುಂಡೂರಾವ್ | : | 12ನೇ ಜನವರಿ 1980 ರಿಂದ 6ನೇ ಜನವರಿ 1983 |
| 10 | ಶ್ರೀ ರಾಮಕೃಷ್ಣ ಹೆಗಡೆ | : | 10ನೇ ಜನವರಿ 1983 ರಿಂದ 10ನೇ ಆಗಸ್ಟ್ 1988 |
| 11 | ಶ್ರೀ ಎಸ್.ಆರ್. ಬೊಮ್ಮಾಯಿ | : | 13ನೇ ಆಗಸ್ಟ್ 1988 ರಿಂದ 21ನೇ ಏಪ್ರಿಲ್ 1989 |
| 12 | ಶ್ರೀ ಎಸ್. ಬಂಗಾರಪ್ಪ | : | 17ನೇ ಅಕ್ಟೋಬರ್ 1990 ರಿಂದ 19ನೇ ನವೆಂಬರ್ 1992 |
| 13 | ಶ್ರೀ ಎಮ್. ವೀರಪ್ಪ ಮೊಯಿಲಿ | : | 19ನೇ ನವೆಂಬರ್ 1992 ರಿಂದ 10ನೇ ಡಿಸೆಂಬರ್ 1994 |
| 14 | ಶ್ರೀ ಎಚ್.ಡಿ. ದೇವೇಗೌಡ | : | 11ನೇ ಡಿಸೆಂಬರ್ 1994 ರಿಂದ 31ನೇ ಮೇ 1996 |
| 15 | ಶ್ರೀ ಜೆ.ಎಚ್. ಪಟೇಲ್ | : | 31ನೇ ಮೇ 1996 ರಿಂದ 7ನೇ ಅಕ್ಟೋಬರ್ 1999 |
| 16 | ಶ್ರೀ ಎಸ್.ಎಮ್. ಕೃಷ್ಣ | : | 11ನೇ ಅಕ್ಟೋಬರ್ 1999 ರಿಂದ 28ನೇ ಮೇ 2004 |
| 17 | ಶ್ರೀ ಧರಮ್ ಸಿಂಗ್ | : | 28ನೇ ಮೇ 2004 ರಿಂದ 28ನೇ ಜನವರಿ 2006 |
| 18 | ಶ್ರೀ ಎಚ್.ಡಿ. ಕುಮಾರಸ್ವಾಮಿ | : | 3ನೇ ಫೆಬ್ರವರಿ 2006 ರಿಂದ 8ನೇ ಅಕ್ಟೋಬರ್ 2007 |
| | | | 23ನೇ ಮೇ 2018 ರಿಂದ 23ನೇ ಜುಲೈ 2019 |
| 19 | ಶ್ರೀ ಬಿ.ಎಸ್. ಯಡಿಯೂರಪ್ಪ | : | 12ನೇ ನವೆಂಬರ್ 2007 ರಿಂದ 19ನೇ ನವೆಂಬರ್ 2007 |
| | | | 30ನೇ ಮೇ 2008 ರಿಂದ 3ನೇ ಆಗಸ್ಟ್ 2011 |
| | | | 17ನೇ ಮೇ 2018 ರಿಂದ 19ನೇ ಮೇ 2018 |
| 20 | ಶ್ರೀ ಡಿ. ವಿ. ಸದಾನಂದ ಗೌಡ | : | 4ನೇ ಆಗಸ್ಟ್ 2011 ರಿಂದ 12ನೇ ಜುಲೈ 2012 |
| 21 | ಶ್ರೀ ಜಗದೀಶ್ ಶೆಟ್ಟರ್ | : | 12ನೇ ಜುಲೈ 2012 ರಿಂದ 12ನೇ ಮೇ 2013 |
| 22 | ಶ್ರೀ ಸಿದ್ದರಾಮಯ್ಯ | : | 13ನೇ ಮೇ 2013 ರಿಂದ 17ನೇ ಮೇ 2018 |
| | ಶ್ರೀ ಬಿ.ಎಸ್. ಯಡಿಯೂರಪ್ಪ | : | 24ನೇ ಜುಲೈ 2019 ರಿಂದ ಇಂದಿನವರೆಗೂ |

# ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

| ಕ್ರಮ | ಇಸವಿ | ಸ್ಥಳ | ಹೆಸರು |
|---|---|---|---|
| 1 | 1915 | ಬೆಂಗಳೂರು | ಎಚ್.ವಿ.ನಂಜುಂಡಯ್ಯ |
| 2 | 1916 | ಬೆಂಗಳೂರು | ಎಚ್.ವಿ.ನಂಜುಂಡಯ್ಯ |
| 3 | 1917 | ಮೈಸೂರು | ಎಚ್.ವಿ.ನಂಜುಂಡಯ್ಯ |
| 4 | 1918 | ಧಾರವಾಡ | ಆರ್.ನರಸಿಂಹಾಚಾರ್ |
| 5 | 1919 | ಹಾಸನ | ಕರ್ಪೂರ ಶ್ರೀನಿವಾಸರಾವ್ |
| 6 | 1920 | ಹೊಸಪೇಟೆ | ರೊದ್ದ ಶ್ರೀನಿವಾಸರಾಯ |
| 7 | 1921 | ಚಿಕ್ಕಮಗಳೂರು | ಕೆ.ಪಿ.ಪುಟ್ಟಣ್ಣ ಚೆಟ್ಟಿ |
| 8 | 1922 | ದಾವಣಗೆರೆ | ಎಂ.ವೆಂಕಟಕೃಷ್ಣಯ್ಯ |
| 9 | 1923 | ಬಿಜಾಪುರ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ |
| 10 | 1924 | ಕೋಲಾರ | ಹೊಸಕೋಟೆ ಕೃಷ್ಣಶಾಸ್ತ್ರಿ |
| 11 | 1925 | ಬೆಳಗಾವಿ | ಬೆನಗಲ್ ರಾಮರಾವ್ |
| 12 | 1926 | ಬಳ್ಳಾರಿ | ಫ.ಗು.ಹಳಕಟ್ಟಿ |
| 13 | 1927 | ಮಂಗಳೂರು | ಆರ್.ತಾತಾಚಾರ್ಯ |
| 14 | 1928 | ಕಲಬುರ್ಗಿ | ಬಿ ಎಂ ಶ್ರೀಕಂಠಯ್ಯ |
| 15 | 1929 | ಬೆಳಗಾವಿ | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| 16 | 1930 | ಮೈಸೂರು | ಆಲೂರು ವೆಂಕಟರಾಯರು |
| 17 | 1931 | ಕಾರವಾರ | ಮುಳಿಯ ತಿಮ್ಮಪ್ಪಯ್ಯ |
| 18 | 1932 | ಮಡಿಕೇರಿ | ಡಿ ವಿ ಗುಂಡಪ್ಪ |
| 19 | 1933 | ಹುಬ್ಬಳ್ಳಿ | ವೈ. ನಾಗೇಶ ಶಾಸ್ತ್ರಿ |
| 20 | 1934 | ರಾಯಚೂರು | ಪಂಜೆ ಮಂಗೇಶರಾಯರು |
| 21 | 1935 | ಮುಂಬಯಿ | ಎನ್.ಎಸ್.ಸುಬ್ಬರಾವ್ |
| 22 | 1937 | ಜಮಖಂಡಿ | ಬೆಳ್ಳಾವೆ ವೆಂಕಟನಾರಣಪ್ಪ |
| 23 | 1938 | ಬಳ್ಳಾರಿ | ರಂಗನಾಥ ರಾಮಚಂದ್ರ ದಿವಾಕರ |

| ಕ್ರಮ | ಇಸವಿ | ಸ್ಥಳ | ಹೆಸರು |
|---|---|---|---|
| 24 | 1939 | ಬೆಳಗಾವಿ | ಮುಡವೀಡು ಕೃಷ್ಣರಾಯರು |
| 25 | 1940 | ಧಾರವಾಡ | ಚಂದ್ರಶೇಖರ ಶಾಸ್ತ್ರಿ ವೈ |
| 26 | 1941 | ಹೈದರಾಬಾದ್ | ಎ.ಆರ್.ಕೃಷ್ಣಶಾಸ್ತ್ರಿ |
| 27 | 1943 | ಶಿವಮೊಗ್ಗ | ದ.ರಾ.ಬೇಂದ್ರೆ |
| 28 | 1944 | ರಬಕವಿ | ಶಿ ಶಿ ಬಸವನಾಳ |
| 29 | 1945 | ಮದರಾಸು | ಟಿ. ಪಿ. ಕೈಲಾಸಂ |
| 30 | 1947 | ಹರಪನಹಳ್ಳಿ | ಸಿ.ಕೆ.ವೆಂಕಟರಾಮಯ್ಯ |
| 31 | 1948 | ಕಾಸರಗೋಡು | ತಿ.ತಾ.ಶರ್ಮ |
| 32 | 1949 | ಕಲಬುರ್ಗಿ | ಉತ್ತಂಗಿ ಚೆನ್ನಪ್ಪ |
| 33 | 1950 | ಸೊಲ್ಲಾಪುರ | ಎಂ ಆರ್ ಶ್ರೀನಿವಾಸಮೂರ್ತಿ |
| 34 | 1951 | ಮುಂಬಯಿ | ಎಂ ಗೋವಿಂದ ಪೈ |
| 35 | 1952 | ಬೇಲೂರು | ಎಸ್.ಸಿ.ನಂದೀಮಠ |
| 36 | 1954 | ಕುಮಟಾ | ವಿ.ಸೀತಾರಾಮಯ್ಯ |
| 37 | 1955 | ಮೈಸೂರು | ಕೆ ಶಿವರಾಮ ಕಾರಂತ |
| 38 | 1955 | ರಾಯಚೂರು | ಆದ್ಯಾರಂಗಾಚಾರ್ಯ (ಶ್ರೀರಂಗ) |
| 39 | 1957 | ಧಾರವಾಡ | ಕುವೆಂಪು |
| 40 | 1958 | ಬಳ್ಳಾರಿ | ವಿ.ಕೆ.ಗೋಕಾಕ್ |
| 41 | 1959 | ಬೀದರ್ | ಡಿ.ಎಲ್.ನರಸಿಂಹಾಚಾರ್ |
| 42 | 1960 | ಮಣಿಪಾಲ | ಅ.ನ. ಕೃಷ್ಣರಾಯ |
| 43 | 1961 | ಗದಗ | ಕೆ.ಜಿ.ಕುಂದಣಗಾರ |
| 44 | 1963 | ಸಿದ್ದಗಂಗಾ | ರಂ.ಶ್ರೀ.ಮುಗಳಿ |
| 45 | 1965 | ಕಾರವಾರ | ಕಡೆಂಗೋಡ್ಲು ಶಂಕರಭಟ್ಟ |
| 46 | 1967 | ಶ್ರವಣಬೆಳಗೊಳ | ಆ.ನೇ.ಉಪಾಧ್ಯೆ |

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

| ಕ್ರಮ | ಇಸವಿ | ಸ್ಥಳ | ಹೆಸರು |
|---|---|---|---|
| 47 | 1970 | ಬೆಂಗಳೂರು | ದೇ.ಜವರೇಗೌಡ |
| 48 | 1974 | ಮಂಡ್ಯ | ಜಯದೇವಿತಾಯಿ ಲಿಗಾಡೆ |
| 49 | 1976 | ಶಿವಮೊಗ್ಗ | ಎಸ್.ವಿ.ರಂಗಣ್ಣ |
| 50 | 1978 | ನವದೆಹಲಿ | ಜಿ.ಪಿ.ರಾಜರತ್ನಂ |
| 51 | 1979 | ಧರ್ಮಸ್ಥಳ | ಎಂ ಗೋಪಾಲಕೃಷ್ಣ ಅಡಿಗ |
| 52 | 1980 | ಬೆಳಗಾವಿ | ಬಸವರಾಜ ಕಟ್ಟೀಮನಿ |
| 53 | 1981 | ಚಿಕ್ಕಮಗಳೂರು | ಪು.ತಿ.ನರಸಿಂಹಾಚಾರ್ |
| 54 | 1981 | ಮಡಿಕೇರಿ | ಶಂ.ಬಾ.ಜೋಶಿ |
| 55 | 1982 | ಶಿರಸಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ |
| 56 | 1984 | ಕೈವಾರ | ಎ.ಎನ್.ಮೂರ್ತಿರಾವ್ |
| 57 | 1985 | ಬೀದರ್ | ಹಾ.ಮಾ.ನಾಯಕ |
| 58 | 1987 | ಕಲಬುರ್ಗಿ | ಸಿದ್ದಯ್ಯ ಪುರಾಣಿಕ |
| 59 | 1990 | ಹುಬ್ಬಳ್ಳಿ | ಆರ್.ಸಿ.ಹಿರೇಮಠ |
| 60 | 1991 | ಮೈಸೂರು | ಕೆ.ಎಸ್. ನರಸಿಂಹಸ್ವಾಮಿ |
| 61 | 1992 | ದಾವಣಗೆರೆ | ಜಿ.ಎಸ್.ಶಿವರುದ್ರಪ್ಪ |
| 62 | 1993 | ಕೊಪ್ಪಳ | ಸಿಂಪಿ ಲಿಂಗಣ್ಣ |
| 63 | 1994 | ಮಂಡ್ಯ | ಚದುರಂಗ |
| 64 | 1995 | ಮುಧೋಳ | ಎಚ್ ಎಲ್ ನಾಗೇಗೌಡ |
| 65 | 1996 | ಹಾಸನ | ಚನ್ನವೀರ ಕಣವಿ |
| 66 | 1997 | ಮಂಗಳೂರು | ಕಯ್ಯಾರ ಕಿಞ್ಞಣ್ಣ ರೈ |
| 67 | 1999 | ಕನಕಪುರ | ಎಸ್.ಎಲ್.ಭೈರಪ್ಪ |
| 68 | 2000 | ಬಾಗಲಕೋಟೆ | ಶಾಂತಾದೇವಿ ಮಾಳವಾಡ |
| 69 | 2002 | ತುಮಕೂರು | ಯು.ಆರ್. ಅನಂತಮೂರ್ತಿ |

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

| ಕ್ರಮ | ಇಸವಿ | ಸ್ಥಳ | ಹೆಸರು |
|---|---|---|---|
| 70 | 2003 | ಬೆಳಗಾವಿ | ಡಾ.ಪಾಟೀಲ ಪುಟ್ಟಪ್ಪ |
| 71 | 2004 | ಮೂಡುಬಿದಿರೆ | ಕಮಲಾ ಹಂಪನಾ |
| 72 | 2006 | ಬೀದರ್ | ಶಾಂತರಸ |
| 73 | 2007 | ಶಿವಮೊಗ್ಗ | ಕೆ ಎಸ್ ನಿಸಾರ್ ಅಹಮ್ಮದ್ |
| 74 | 2008 | ಉಡುಪಿ | ಎಲ್. ಎಸ್. ಶೇಷಗಿರಿ ರಾವ್ |
| 75 | 2009 | ಚಿತ್ರದುರ್ಗ | ಎಲ್. ಬಸವರಾಜು |
| 76 | 2010 | ಗದಗ | ಗೀತಾ ನಾಗಭೂಷಣ |
| 77 | 2011 | ಬೆಂಗಳೂರು | ಜಿ. ವೆಂಕಟಸುಬ್ಬಯ್ಯ |
| 78 | 2012 | ಗಂಗಾವತಿ | ಸಿ.ಪಿ ಕೃಷ್ಣಕುಮಾರ್ |
| 79 | 2013 | ವಿಜಯಪುರ | ಕೋ.ಚನ್ನಬಸಪ್ಪ |
| 80 | 2014 | ಮಡಿಕೇರಿ | ನಾ ಡಿಸೋಜ |
| 81 | 2015 | ಶ್ರವಣಬೆಳಗೊಳ | ಡಾ. ಸಿದ್ದಲಿಂಗಯ್ಯ |
| 82 | 2016 | ರಾಯಚೂರು | ಬರಗೂರು ರಾಮಚಂದ್ರಪ್ಪ |
| 83 | 2017 | ಮೈಸೂರು | ಚಂದ್ರಶೇಖರ ಪಾಟೀಲ (ಚಂಪಾ) |
| 84 | 2018 | ಧಾರವಾಡ | ಚಂದ್ರಶೇಖರ ಕಂಬಾರ |
| 85 | 2020 | ಕಲಬುರ್ಗಿ | ಎಚ್. ಎಸ್. ವೆಂಕಟೇಶಮೂರ್ತಿ |

# ಲೇಖಕರು – ಕಾವ್ಯನಾಮ

| | | |
|---|---|---|
| 1 | ಗದುಗಿನ ನಾರಣಪ್ಪ | ಕುಮಾರವ್ಯಾಸ |
| 2 | ನಂದಳಿಕೆ ಲಕ್ಷ್ಮೀನಾರಣಪ್ಪ | ಮುದ್ದಣ್ಣ |
| 3 | ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ | ಕುವೆಂಪು |
| 4 | ದತ್ತಾತ್ರೇಯ ರಾಮಚಂದ್ರ ಬೇಂದ್ರೆ | ಅಂಬಿಕಾತನಯದತ್ತ |
| 5 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಶ್ರೀನಿವಾಸ |
| 6 | ದೇವನಹಳ್ಳಿ  ವೆಂಕಟರಮಣಪ್ಪ ಗುಂಡಪ್ಪ | ಡಿವಿಜಿ |
| 7 | ಪಾಟೀಲ ಪುಟ್ಟಪ್ಪ | ಪಾಪು |
| 8 | ವಿನಾಯಕ ಕೃಷ್ಣ ಗೋಕಾಕ | ವಿನಾಯಕ |
| 9 | ಬಳ್ಳಾರಿ ಭೀಮಸೇನರಾವ್ | ಬೀಚಿ |
| 10 | ಬಿ ಜಿ ಜೋಶಿ | ಜಡಭರತ |
| 11 | ಎಂ ಶಿವರಾಂ | ರಾಶಿ |
| 12 | ಸುಬ್ರಹ್ಮಣ್ಯರಾಜೇ ಅರಸ್ | ಚದುರಂಗ |
| 13 | ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್ | ತರಾಸು |
| 14 | ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ | ಅನಕೃ |
| 15 | ಆದ್ಯ ರಂಗಚಾರ್ಯ | ಶ್ರೀರಂಗ |
| 16 | ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯ | ತೀನಂಶ್ರೀ |
| 17 | ಸಿದ್ದಯ್ಯ ಪುರಾಣಿಕ | ಕಾವ್ಯಾನಂದ |
| 18 | ಪಂಜೆ ಮಂಗೇಶರಾಯ | ಕವಿಶಿಷ್ಯ |
| 19 | ಕುಳಕುಂದ ಶಿವರಾಯ | ನಿರಂಜನ |
| 20 | ಪುರೋಹಿತ ತಿರುನಾರಾಯಣ ನರಸಿಂಹಚಾರ್ಯ | ಪುತಿನ |
| 21 | ಜಾನಕಿ ಎಸ್. ಮೂರ್ತಿ | ವೈದೇಹಿ |
| 22 | ಬೆಟಗೇರಿ ಕೃಷ್ಣಶರ್ಮ | ಆನಂದ ಕಂದ |
| 23 | ಹಾರೋಗದ್ದೆ ಮಾನಪ್ಪ ನಾಯಕ | ಹಾಮಾನಾ |
| 24 | ರಂ. ಶ್ರೀ. ಮುಗಳಿ | ರಸಿಕರಂಗ |
| 25 | ಬಿ. ಎಂ. ಶ್ರೀಕಂಠಯ್ಯ | ಶ್ರೀ |


| | | |
|---|---|---|
| 26 | ದೇ. ಜವರೇಗೌಡ | ದೇಜಗೌ |
| 27 | ಸಿ.ಪಿ.ಕೃಷ್ಣಕುಮಾರ್ | ಸಿಪಿಕೆ |
| 28 | ಅಜ್ಜಂಪುರ ಸೀತಾರಾಂ | ಆನಂದ |
| 29 | ಪಿ. ನರಸಿಂಗರಾವ್ | ಪರ್ವತವಾಣಿ |
| 30 | ಚೆನ್ನಮಲ್ಲಪ್ಪ ಗಲಗಲಿ | ಮಧುರಚೆನ್ನ |
| 31 | ಬಿ ಎನ್ ಸುಬ್ಬಮ್ಮ | ವಾಣಿ |
| 32 | ತಿರುಮಲೆ ರಾಜಮ್ಮ | ಭಾರತಿ |
| 33 | ದೊಡ್ಡರಂಗೇಗೌಡ | ಮನುಜ |
| 34 | ಮಲ್ಲಾಡಹಳ್ಳಿ ರಾಘವೇಂದ್ರಸ್ವಾಮಿ | ತಿರುಕ |
| 35 | ಎಂ. ಆರ್. ಶ್ರೀನಿವಾಸಮೂರ್ತಿ | ಎಂಆರ್‌ಶ್ರೀ |
| 36 | ಎಂ. ವಿ. ಸೀತಾರಾಮಯ್ಯ | ರಾಘವ |
| 37 | ವೀ. ಚಿಕ್ಕವೀರಯ್ಯ | ವೀಚಿ |
| 38 | ಬಳ್ಕೂರು ಸುಬ್ರಾಯ ಅಡಿಗ | ಸವ್ಯಸಾಚಿ |
| 39 | ಅನಸೂಯ ಶಂಕರ್ | ತ್ರಿವೇಣಿ |
| 40 | ವಿ. ಸೀತಾರಾಮಯ್ಯ | ವಿಸೀ |
| 41 | ರಾಮಚಂದ್ರಭೀಮರಾವ್ ಕುಲಕರ್ಣಿ | ರಾವ್‌ಬಹದ್ದೂರ್ |
| 42 | ಬಿ ಆರ್ ಗೋಪಿನಾಥ್ | ಚಿರಂಜೀವಿ |
| 43 | ಎಸ್ ಆರ್ ನಾರಾಯಣರಾವ್ | ಭಾರತೀಸುತ |
| 44 | ಬೆಳೆಗೆರೆ ಸೀತಾರಾಮಶಾಸ್ತ್ರಿ | ಕ್ಷೀರಸಾಗರ |
| 45 | ಎಂ ಎ ಗುಂಡಪ್ಪ | ರಾಘವ ಕವಿಮಿತ್ರ |
| 46 | ಬಾಬು ಅನಂತಚಾರ್ಯ ಶಹಪುರಾ | ಸತ್ಯಕಾಮ |
| 47 | ಬಾಳಾಚಾರ್ಯ ಸಕ್ಕರಿ | ಶಾಂತಕವಿ |
| 48 | ಸಿದ್ದಲಿಂಗಯ್ಯ | ಆದಿತ್ಯ |
| 49 | ಎಚ್ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ | ಸಮದರ್ಶಿ |
| 50 | ಚಂದ್ರಶೇಖರ ಪಾಟೀಲ | ಚಂಪಾ |

# ಬಿರುದು–ಬಿರುದಾಂಕಿತರು


| | | |
|---|---|---|
| 1 | ಕನ್ನಡದ ಕಣ್ವ | ಬಿ.ಎಂ.ಶ್ರೀಕಂಠಯ್ಯ |
| 2 | ಆದಿಕವಿ | ಪಂಪ |
| 3 | ಕವಿ ಚಕ್ರವರ್ತಿ | ರನ್ನ |
| 4 | ಉಭಯ ಚಕ್ರವರ್ತಿ | ಪೊನ್ನ |
| 5 | ರಗಳೆ ಕವಿ | ಹರಿಹರ |
| 6 | ಅಭಿನವ ಭೋಜರಾಜ | ಮುಮ್ಮಡಿ ಕೃಷ್ಣರಾಜ ಒಡೆಯರು |
| 7 | ಪ್ರಾಕ್ತನ ವಿಮರ್ಶಕ ವಿಚಕ್ಷಣ | ಆರ್.ನರಸಿಂಹಾಚಾರ್ |
| 8 | ರೂಪಕ ಸಾಮ್ರಾಜ್ಯ ಚಕ್ರವರ್ತಿ | ಕುಮಾರ ವ್ಯಾಸ |
| 9 | ಉಪಮಾಲೋಲ ನಾದಲೋಲ | ಲಕ್ಷ್ಮೀಶ |
| 10 | ಕರ್ನಾಟಕ ಸಂಗೀತ ಪಿತಾಮಹ | ಪುರಂದರ ದಾಸ |
| 11 | ಭಕ್ತಿ ಭಂಡಾರಿ | ಬಸವಣ್ಣ |
| 12 | ಅಭಿನವ ಕಾಳಿದಾಸ | ಬಸವಪ್ಪಶಾಸ್ತ್ರಿ |
| 13 | ಕನ್ನಡದ ಆಸ್ತಿ/ಸಣ್ಣ ಕತೆಗಳ ಜನಕ | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| 14 | ವರಕವಿ | ದ ರಾ ಬೇಂದ್ರೆ |
| 15 | ಪ್ರೇಮಕವಿ/ಮಲ್ಲಿಗೆಯ ಕವಿ | ಕೆ.ಎಸ್.ನರಸಿಂಹಸ್ವಾಮಿ |
| 16 | ಕಡಲ ತೀರದ ಭಾರ್ಗವ | ಕೆ.ಶಿವರಾಮಕಾರಂತ |
| 17 | ಚಲಿಸುವ ನಿಘಂಟು | ಡಿ.ಎಲ್.ನರಸಿಂಹಾಚಾರ್ |
| 18 | ಕನ್ನಡದ ಕಾಳಿದಾಸ | ಪ್ರೊ ಎಸ್ ವಿ ಪರಮೇಶ್ವರ ಭಟ್ |
| 19 | ದಾನ ಚಿಂತಾಮಣಿ | ಅತ್ತಿಮಬ್ಬೆ |
| 20 | ಕನ್ನಡ ಕುಲಪುರೋಹಿತ | ಆಲೂರು ವೆಂಕಟರಾಯ |
| 21 | ಕನ್ನಡದ ಶೇಕ್ಸ್ ಪಿಯರ್ | ಕಂದಗಲ್ ಹನುಮಂತರಾಯ |
| 22 | ಕನ್ನಡದ ಕೋಗಿಲೆ | ಪಿ.ಕಾಳಿಂಗರಾವ್ |
| 23 | ಕಾದಂಬರಿ ಸಾರ್ವಭೌಮ | ಅ.ನ.ಕೃಷ್ಣರಾಯ |
| 24 | ಕರ್ನಾಟಕ ಪ್ರಹಸನ ಪಿತಾಮಹ | ಟಿ.ಪಿ.ಕೈಲಾಸಂ |
| 25 | ಕರ್ನಾಟಕದ ಕೇಸರಿ | ಗಂಗಾಧರರಾವ್ ದೇಶಪಾಂಡೆ |
| 26 | ಸಂಗೀತ ಗಂಗಾದೇವಿ | ಗಂಗೂಬಾಯಿ ಹಾನಗಲ್ |
| 27 | ನಾಟಕರತ್ನ | ಗುಬ್ಬಿ ವೀರಣ್ಣ |
| 28 | ಚುಟುಕು ಬ್ರಹ್ಮ | ದಿನಕರ ದೇಸಾಯಿ |

| | | |
|---|---|---|
| 29 | ಅಭಿನವ ಪಂಪ | ನಾಗಚಂದ್ರ |
| 30 | ಕನ್ನಡದ ದಾಸಯ್ಯ | ಶಾಂತಕವಿ |
| 31 | ಕಾದಂಬರಿ ಪಿತಾಮಹ | ಗಳಗನಾಥ |
| 32 | ತ್ರಿಪದಿ ಚಕ್ರವರ್ತಿ | ಸರ್ವಜ್ಞ |
| 33 | ಸಂತಕವಿ | ಪುತಿನ |
| 34 | ಷಟ್ಪದಿ ಬ್ರಹ್ಮ | ರಾಘವಾಂಕ |
| 35 | ಸಾವಿರ ಹಾಡುಗಳ ಸರದಾರ | ಬಾಳಪ್ಪ ಹುಕ್ಕೇರಿ |
| 36 | ಕನ್ನಡದ ನಾಡೋಜ | ಮುಳಿಯ ತಿಮ್ಮಪ್ಪಯ್ಯ |
| 37 | ಕರ್ನಾಟಕ ಶಾಸನಗಳ ಪಿತಾಮಹ | ಬಿ.ಎಲ್.ರೈಸ್ |
| 38 | ಹರಿದಾಸ ಪಿತಾಮಹ | ಶ್ರೀಪಾದರಾಯ |
| 39 | ಅಭಿನವ ಸರ್ವಜ್ಞ | ರೆ. ಉತ್ತಂಗಿ ಚೆನ್ನಪ್ಪ |
| 40 | ವಚನಶಾಸ್ತ್ರ ಪಿತಾಮಹ | ಫ.ಗು.ಹಳಕಟ್ಟಿ |
| 41 | ಕನ್ನಡದ ಸೇನಾನಿ | ಎ ಆರ್ ಕೃಷ್ಣಾಶಾಸ್ತ್ರಿ |
| 42 | ಕರ್ನಾಟಕದ ಉಕ್ಕಿನ ಮನುಷ್ಯ | ಹಳ್ಳಿಕೇರಿ ಗುದ್ಲೆಪ್ಪ |
| 43 | ರಾಜಮಂತ್ರ ಪ್ರವೀಣ | ಹೆಚ್ ವಿ ನಂಜುಂಡಯ್ಯ |
| 44 | ಕವಿ ತಿಲಕ | ಸೋಸಲೆ ಅಯ್ಯಾಶಾಸ್ತ್ರಿಗಳು |
| 45 | ಕರ್ನಾಟಕ ಪತ್ರಿಕೋದ್ಯಮದ ಭೀಷ್ಮ | ತಿರುಮಲೆ ತಾತಾಚಾರ್ಯ ಶರ್ಮ |
| 46 | ದಕ್ಷಿಣಾಪಥೇಶ್ವರ | ಇಮ್ಮಡಿ ಪುಲಕೇಶಿ |
| 47 | ಕರ್ನಾಟಕದ ಕಬೀರ | ಸಂತ ಶಿಶುನಾಳ ಶರೀಫ |
| 48 | ಸಂಗೀತ ಕಲಾತಪಸ್ವಿ | ವಾಸುದೇವಾಚಾರ್ಯ |
| 49 | ನಾಟಕ ಶಿರೋಮಣಿ | ಎ ವಿ ವರದಾಚಾರ್ |
| 50 | ವೈಣಿಕ ಶಿಖಾಮಣಿ | ವೀಣೆ ಶೇಷಣ್ಣ |
| 51 | ಕರ್ನಾಟಕ ರಾಜ್ಯ ರಮಾರಮಣ | ಶ್ರೀ ಕೃಷ್ಣದೇವರಾಯ |
| 52 | ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ | ವಿದ್ಯಾರಣ್ಯರು |
| 53 | ಕನ್ನಡದ ಹುಲಿ | ಡೆಪ್ಯುಟಿ ಚೆನ್ನಬಸಪ್ಪ |
| 54 | ಕರ್ನಾಟಕದ ಗಾಂಧಿ | ಹರ್ಡೇಕರ್ ಮಂಜಪ್ಪ |
| 55 | ವಚನ ಪಿತಾಮಹ | ಫ ಗು ಹಳಕಟ್ಟಿ |


# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು




**1967**
ಕುವೆಂಪು
ಶ್ರೀ ರಾಮಾಯಣ ದರ್ಶನಂ




**1973**
ದ. ರಾ. ಬೇಂದ್ರೆ
ನಾಕುತಂತಿ




**1977**
ಶಿವರಾಮ ಕಾರಂತ
ಮೂಕಜ್ಜಿಯ ಕನಸುಗಳು



**1983**
ಮಾಸ್ತಿ ವೆಂಕಟೇಶ ಅಯ್ಯಂಗಾರ್
ಚಿಕ್ಕವೀರ ರಾಜೇಂದ್ರ




**1990**
ವಿನಾಯಕಕೃಷ್ಣ ಗೋಕಾಕ್
ಭಾರತ ಸಿಂಧೂ ರಶ್ಮಿ



**1994**
ಯು. ಆರ್. ಅನಂತಮೂರ್ತಿ
ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆಗಾಗಿ



**1998**
ಗಿರೀಶ್ ಕಾರ್ನಾಡ್
ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆಗಾಗಿ



**2010**
ಚಂದ್ರಶೇಖರ ಕಂಬಾರ
ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆಗಾಗಿ

# ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

| | | |
|---|---|---|
| 1955 | ಕುವೆಂಪು | ಶ್ರೀ ರಾಮಾಯಣ ದರ್ಶನಂ |
| 1956 | ರಂ.ಶ್ರೀ.ಮುಗಳಿ | ಕನ್ನಡ ಸಾಹಿತ್ಯ ಚರಿತ್ರೆ |
| 1958 | ದ.ರಾ.ಬೇಂದ್ರೆ | ಅರಳು–ಮರಳು |
| 1959 | ಕೆ. ಶಿವರಾಮ ಕಾರಂತ | ಯಕ್ಷಗಾನ ಬಯಲಾಟ |
| 1960 | ವಿ. ಕೃ. ಗೋಕಾಕ | ದ್ಯಾವಾ–ಪೃಥ್ವೀ |
| 1961 | ಎ. ಆರ್. ಕೃಷ್ಣಶಾಸ್ತ್ರಿ | ಬಂಕಿಮ ಚಂದ್ರ |
| 1962 | ದೇವುಡು ನರಸಿಂಹ ಶಾಸ್ತ್ರಿ | ಮಹಾಕ್ಷತ್ರಿಯ |
| 1964 | ಬಿ. ಪುಟ್ಟಸ್ವಾಮಯ್ಯ | ಕ್ರಾಂತಿ ಕಲ್ಯಾಣ |
| 1965 | ಎಸ್. ವಿ. ರಂಗಣ್ಣ | ರಂಗ ಬಿನ್ನಪ |
| 1966 | ಪು. ತಿ. ನರಸಿಂಹಾಚಾರ್ | ಹಂಸ ದಮಯಂತಿ ಮತ್ತು ಇತರ ರೂಪಕಗಳು |
| 1967 | ಡಿ. ವಿ. ಗುಂಡಪ್ಪ | ಶ್ರೀಮದ್ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ |
| 1968 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಸಣ್ಣ ಕಥೆಗಳು |
| 1969 | ಎಚ್. ತಿಪ್ಪೇರುದ್ರಸ್ವಾಮಿ | ಕರ್ನಾಟಕ ಸಂಸ್ಕೃತಿ ಸಮೀಕ್ಷೆ |
| 1970 | ಶಂ. ಬಾ. ಜೋಶಿ | ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ |
| 1971 | ಆದ್ಯ ರಂಗಾಚಾರ್ಯ | ಕವಿಕುಲಗುರು ಕಾಳಿದಾಸ |
| 1972 | ಸಂ. ಶಿ. ಭೂಸನೂರ ಮಠ | ಶೂನ್ಯ ಸಂಪಾದನೆ ಪರಾಮರ್ಶೆ |
| 1973 | ವಿ. ಸೀತಾರಾಮಯ್ಯ | ಅರಲು ಬರಲು |
| 1974 | ಎಂ. ಗೋಪಾಲಕೃಷ್ಣ ಅಡಿಗ | ವರ್ಧಮಾನ |
| 1975 | ಎಸ್. ಎಲ್. ಭೈರಪ್ಪ | ದಾಟು |
| 1976 | ಎಂ. ಶಿವರಾಂ | ಮನ ಮಂಥನ |
| 1977 | ಕೆ. ಎಸ್. ನರಸಿಂಹಸ್ವಾಮಿ | ತೆರೆದ ಬಾಗಿಲು |
| 1978 | ಬಿ. ಜಿ. ಎಲ್. ಸ್ವಾಮಿ | ಹಸುರು ಹೊನ್ನು |
| 1979 | ಎ. ಎನ್. ಮೂರ್ತಿರಾವ್ | ಚಿತ್ರಗಳು ಪತ್ರಗಳು |
| 1980 | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಅಮೆರಿಕಾದಲ್ಲಿ ಗೊರೂರು |
| 1981 | ಚನ್ನವೀರ ಕಣವಿ | ಜೀವಧ್ವನಿ |
| 1982 | ಚದುರಂಗ | ವೈಶಾಖ |
| 1983 | ಯಶವಂತ ಚಿತ್ತಾಲ | ಕಥೆಯಾದಳು ಹುಡುಗಿ |
| 1984 | ಜಿ. ಎಸ್. ಶಿವರುದ್ರಪ್ಪ | ಕಾವ್ಯಾರ್ಥ ಚಿಂತನ |
| 1985 | ತ. ರಾ. ಸುಬ್ಬರಾವ್ | ದುರ್ಗಾಸ್ತಮಾನ |
| 1986 | ವ್ಯಾಸರಾಯ ಬಲ್ಲಾಳ | ಬಂಡಾಯ |
| 1987 | ಕೆ. ಪಿ. ಪೂರ್ಣಚಂದ್ರ ತೇಜಸ್ವಿ | ಚಿದಂಬರ ರಹಸ್ಯ |
| 1988 | ಶಂಕರ ಮೊಕಾಶಿ ಪುಣೇಕರ | ಅವಧೇಶ್ವರಿ |
| 1989 | ಹಾ. ಮಾ. ನಾಯಕ | ಸಂಪ್ರತಿ |

## ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

| | | |
|---|---|---|
| 1990 | ದೇವನೂರು ಮಹಾದೇವ | ಕುಸುಮಬಾಲೆ |
| 1991 | ಚಂದ್ರಶೇಖರ ಕಂಬಾರ | ಸಿರಿಸಂಪಿಗೆ |
| 1992 | ಸು. ರಂ. ಎಕ್ಕುಂಡಿ | ಬಕುಳದ ಹೂವುಗಳು |
| 1993 | ಪಿ. ಲಂಕೇಶ್ | ಕಲ್ಲು ಕರಗುವ ಸಮಯ |
| 1994 | ಗಿರೀಶ್ ಕಾರ್ನಾಡ್ | ತಲೆದಂಡ |
| 1995 | ಕೀರ್ತಿನಾಥ ಕುರ್ತಕೋಟಿ | ಉರಿಯ ನಾಲಿಗೆ |
| 1996 | ಜಿ. ಎಸ್. ಆಮೂರ | ಭುವನದ ಭಾಗ್ಯ |
| 1997 | ಎಂ. ಚಿದಾನಂದಮೂರ್ತಿ | ಹೊಸತು ಹೊಸತು |
| 1998 | ಬಿ. ಸಿ. ರಾಮಚಂದ್ರ ಶರ್ಮ | ಸಪ್ತಪದಿ |
| 1999 | ಡಿ. ಆರ್. ನಾಗರಾಜ್ | ಸಾಹಿತ್ಯ ಕಥನ |
| 2000 | ಶಾಂತಿನಾಥ ದೇಸಾಯಿ | ಓಂ ಣಮೋ |
| 2001 | ಎಲ್. ಎಸ್. ಶೇಷಗಿರಿ ರಾವ್ | ಇಂಗ್ಲೀಷ್ ಸಾಹಿತ್ಯ ಚರಿತ್ರೆ |
| 2002 | ಎಸ್.ನಾರಾಯಣ ಶೆಟ್ಟಿ (ಸುಜನಾ) | ಯುಗಸಂಧ್ಯಾ |
| 2003 | ಕೆ. ವಿ. ಸುಬ್ಬಣ್ಣ | ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು |
| 2004 | ಗೀತಾ ನಾಗಭೂಷಣ | ಬದುಕು |
| 2005 | ರಾಘವೇಂದ್ರ ಪಾಟೀಲ್ | ತೇರು |
| 2006 | ಎಂ. ಎಂ. ಕಲಬುರ್ಗಿ | ಮಾರ್ಗ – 4 |
| 2007 | ಕುಂ. ವೀರಭದ್ರಪ್ಪ | ಅರಮನೆ |
| 2008 | ಶ್ರೀನಿವಾಸ ಬಿ. ವೈದ್ಯ | ಹಳ್ಳ ಬಂತು ಹಳ್ಳ |
| 2009 | ವೈದೇಹಿ | ಕ್ರೌಂಚ ಪಕ್ಷಿಗಳು |
| 2010 | ರಹಮತ್ ತರೀಕೆರೆ | ಕತ್ತಿಯಂಚಿನ ದಾರಿ |
| 2011 | ಗೋಪಾಲಕೃಷ್ಣ ಪೈ | ಸ್ವಪ್ನ ಸಾರಸ್ವತ |
| 2012 | ಎಚ್. ಎಸ್. ಶಿವಪ್ರಕಾಶ್ | ಮಬ್ಬಿನ ಹಾಗೆ ಕಣಿವೆಯಾಸಿ |
| 2013 | ಸಿ. ಎನ್. ರಾಮಚಂದ್ರನ್ | ಆಖ್ಯಾನ ವ್ಯಾಖ್ಯಾನ |
| 2014 | ಜಿ. ಎಚ್. ನಾಯಕ | ಉತ್ತರಾರ್ಧ |
| 2015 | ಕೆ. ವಿ. ತಿರುಮಲೇಶ್ | ಅಕ್ಷಯ ಕಾವ್ಯ |
| 2016 | ಬೊಳುವಾರು ಮಹಮದ್ ಕುಂಞ್ | ಸ್ವಾತಂತ್ರ್ಯದ ಓಟ |
| 2017 | ಟಿ.ಪಿ.ಅಶೋಕ | ಕಥನ ಭಾರತಿ |
| 2018 | ಕೆ. ಜಿ. ನಾಗರಾಜಪ್ಪ | ಅನುಶ್ರೇಣಿ ಯಜಮಾನಿಕೆ |
| 2019 | ವಿಜಯಮ್ಮ | ಕುದಿಎಸರು |
| 2020 | ವೀರಪ್ಪ ಮೊಯ್ಲಿ | ಶ್ರೀ ಬಾಹುಬಲಿ ಅಹಿಂಸಾದಿಗ್ವಿಜಯ |

1.

ಕರ್ನಾಟಕದ ಪ್ರಪ್ರಥಮ ರಾಜ್ಯಪಾಲರು ಯಾರು ?

**ಶ್ರೀ ಜಯಚಾಮರಾಜೇಂದ್ರ ಒಡೆಯರ್**

2.

ಕರ್ನಾಟಕದ ಪ್ರಪ್ರಥಮ ಮುಖ್ಯಮಂತ್ರಿ ಯಾರು ?

**ಶ್ರೀ ಕೆ ಸಿ ರೆಡ್ಡಿ**

3.

ಕರ್ನಾಟಕದ ಪ್ರಥಮ ಕಾಂಗ್ರೇಸ್ಸೇತರ ಮುಖ್ಯಮಂತ್ರಿ ಯಾರು ?

**ಶ್ರೀ ರಾಮಕೃಷ್ಣ ಹೆಗ್ಗಡೆ**

4.

ಕರ್ನಾಟಕದ ಪ್ರಪ್ರಥಮ ಉಪಮುಖ್ಯಮಂತ್ರಿ ಯಾರು ?

**ಶ್ರೀ ಎಸ್ ಎಮ್ ಕೃಷ್ಣ**

5.

ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಯಾರು ?

**ಶ್ರೀ ಎಸ್.ನಿಜಲಿಂಗಪ್ಪ**

6.

ಕರ್ನಾಟಕ ಸರಕಾರದಲ್ಲಿ ಉಪಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸಿದವರಲ್ಲಿ ಮೊದಲು ಮುಖ್ಯಮಂತ್ರಿಯಾಗಿ ನಿಯೋಜಿತರಾದವರು ಯಾರು?

**ಶ್ರೀ ಜೆ ಹೆಚ್ ಪಟೇಲ್**

7.

ಕರ್ನಾಟಕದ ಹೈಕೋರ್ಟ್‌ನ ಪ್ರಥಮ ಮುಖ್ಯ ನ್ಯಾಯಾಧೀಶರು ಯಾರು?

**ಜಸ್ಟೀಸ್ ಆರ್ ವೆಂಕಟರಾಮಯ್ಯ**

8.

ಕರ್ನಾಟಕ ವಿಧಾನಸಭೆಯ ಪ್ರಥಮ ಸಭಾಪತಿ ಯಾರು ?

**ಶ್ರೀ ವಿ ವೆಂಕಟಪ್ಪ**

9.

ಕರ್ನಾಟಕ ವಿಧಾನಸಭೆಯ ಪ್ರಥಮ ಮಹಿಳಾ ಸ್ಪೀಕರ್ ಯಾರು ?

**ಶ್ರೀಮತಿ ಕೆ ಎಸ್ ನಾಗರತ್ನಮ್ಮ**

10.

ಕರ್ನಾಟಕ ವಿಧಾನ ಪರಿಷತ್ ನ ಪ್ರಥಮ ಸಭಾಪತಿ ಯಾರು ?

**ಶ್ರೀ ಕೆ ಟಿ ಭಾಷ್ಯಂ**

11.

ಕರ್ನಾಟಕದಿಂದ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡ ಮೊದಲ ಕನ್ನಡಿಗರು ಯಾರು ?

**ಜಸ್ಟೀಸ್ ಇ ಎಸ್ ವೆಂಕಟರಾಮಯ್ಯ**

12.

ಭಾರತದ ಪ್ರಧಾನ ಮಂತ್ರಿ ಸ್ಥಾನವನ್ನು ಅಲಂಕರಿಸಿದ ಮೊದಲ ಕನ್ನಡಿಗರು ಯಾರು ?

**ಶ್ರೀ ಹೆಚ್ ಡಿ ದೇವೇಗೌಡ.**

13.

ಕರ್ನಾಟಕದ ಹೈಕೋರ್ಟ್‌ನ ಪ್ರಥಮ ಮೊದಲ ಮಹಿಳಾ ನ್ಯಾಯಮೂರ್ತಿ ಯಾರು ?

**ಶ್ರೀಮತಿ ಮಂಜುಳಾ ಚೆಲ್ಲೂರು**

14.

ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಥಮ ಅಧ್ಯಕ್ಷರು ಯಾರು ?

**ಹೆಚ್ ವಿ ನಂಜುಂಡಯ್ಯ**

15.

ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಥಮ ಮಹಿಳಾ ಅಧ್ಯಕ್ಷರು ಯಾರು ?

**ಶ್ರೀಮತಿ ಜಯದೇವಿ ತಾಯಿ ಲಿಗಾಡೆ**

16.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗರ್ವನರ್ ಆದ ಮೊದಲ ಕನ್ನಡಿಗರು ಯಾರು ?

**ಶ್ರೀ ಬೆನಗಲ್ ರಾಮರಾವ್**

17.

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಸಾಹಿತಿಗಳಲ್ಲಿ ಮೊದಲು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದವರು ಯಾರು ?

**ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್**

18.

ಮೈಸೂರು ಸಂಸ್ಥಾನದ ಮೊದಲ ರಾಜ ಯಾರು ?

**ಯದುರಾಜರು**

19.

ಮೈಸೂರು ಸಂಸ್ಥಾನದ ಮೊದಲ ದಿವಾನರು ಯಾರು ?

**ಪೂರ್ಣಯ್ಯ ನವರು**

20.

ವಿಶ್ವಸಂಸ್ಥೆಯಲ್ಲಿ ಕನ್ನಡದಲ್ಲಿ ಮಾತನಾಡಿದ ಮೊದಲ ಕನ್ನಡಿಗ ಯಾರು ?

**ಮಾಜಿ ಕೇಂದ್ರ ಸಚಿವ ದಿವಂಗತ ಶ್ರೀ ಅನಂತಕುಮಾರ್ ರವರು**

21.

ಲೋಕಸಭೆಯಲ್ಲಿ ಕನ್ನಡದಲ್ಲಿ ಮೊದಲು ಭಾಷಣ ಮಾಡಿದವರು ಯಾರು ?

**ಜೆ ಹೆಚ್ ಪಟೇಲ್**

22.

ಕರ್ನಾಟಕದ ಆಯವ್ಯಯಗಳನ್ನು ಮೊದಲು ಕನ್ನಡದಲ್ಲಿ ಮಂಡಿಸಿದವರು ಯಾರು ?

**ವೀರಪ್ಪ ಮೊಯಿಲಿ**

23.

ಸ್ವತಂತ್ರ ಭಾರತದ ಮೊದಲ ದಂಡನಾಯಕ ಕರ್ನಾಟಕದವರು. ಆ ಮಹನೀಯರು ಯಾರು ?

**ಕೆ.ಎಂ.ಕಾರ್ಯಪ್ಪ**

24.

ಆಕಾಶವಾಣಿಯಲ್ಲಿ ಮೊದಲು ಮಾತನಾಡಿದ ಕನ್ನಡಿಗ ಯಾರು ?

**ಶ್ರೀ ಕುವೆಂಪು**

25.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಪ್ರಥಮ ಕನ್ನಡಿಗ ಸಾಹಿತಿ ಯಾರು ?

**ಡಾ.ವಿ ಕೃ ಗೋಕಾಕ್**

26.

ಕಾಶಿ ವಿಶ್ವವಿದ್ಯಾಲಯದ ಮೊದಲ ಕುಲಪತಿ ಕನ್ನಡದವರು. ಅವರು ಯಾರು?

**ನಾಲ್ವಡಿ ಕೃಷ್ಣರಾಜ ಒಡೆಯರು**

27.

ಕರ್ನಾಟಕದ ಮೊದಲ ರಾಜವಂಶ ಯಾವುದು ?

**ಕದಂಬ**

28.

ಕರ್ನಾಟಕದ ಮೊದಲ ದೊರೆ ಯಾರು ?

**ಮಯೂರ ಶರ್ಮ**

29.

ಕನ್ನಡದ ಮೊದಲ ಪ್ರಾಧ್ಯಾಪಕ ಯಾರು ?

**ತಳುಕಿನ ವೆಂಕಣ್ಣಯ್ಯ**

30.

ಕರ್ನಾಟಕದ ಮೊದಲ ಮಹಿಳಾ ಮಂತ್ರಿ ಯಾರು ?

**ಯಶೋಧರಾ ದಾಸಪ್ಪ**

31.

ಮೊತ್ತ ಮೊದಲು ಭಾವಗೀತೆಗಳನ್ನು ಹಾಡಿದ ಕನ್ನಡಿಗ ಯಾರು ?

**ಎಂ ಆರ್ ಭಾಗವತ್**

32.

ಕೇಂದ್ರ ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್ ಪಡೆದ ಮೊದಲ ಕನ್ನಡಿಗರು ಯಾರು ?

**ಹೊನ್ನಪ್ಪ ಭಾಗವತರ್**

33.

ಕನ್ನಡದ ಮೊದಲ ವಚನಕಾರರು ಯಾರು ?

**ಜೇಡರ ದಾಸಿಮಯ್ಯ**

34.

ಹೊಸ ಕನ್ನಡದಲ್ಲಿ ಮೊದಲ ಚಂಪೂ ಕೃತಿ ಯಾವುದು ?

**ಇಂದಲ್ಲ ನಾಳೆ (ವಿ ಕೃ ಗೋಕಾಕ್)**

35.

ಕನ್ನಡದ ಮೊದಲ ಜೀವನ ಚರಿತ್ರೆಯನ್ನು ಬರೆದವರು ಯಾರು?

**ಎಂ ಎಸ್ ಪುಟ್ಟಣ್ಣ**

36.

'ಭಾರತ ರತ್ನ' ಪ್ರಶಸ್ತಿ ಪುರಸ್ಕೃತರಾದ ಮೊದಲ ಕನ್ನಡಿಗರು ಯಾರು ?

**ಸರ್ ಎಮ್ ವಿಶ್ವೇಶ್ವರಯ್ಯ**

37.

ಜ್ಞಾನ ಪೀಠ ಪ್ರಶಸ್ತಿಗೆ ಪುರಸ್ಕೃತರಾದ ಕನ್ನಡದ ಮೊದಲ ಸಾಹಿತಿ ಯಾರು ?

**ಕುವೆಂಪು**

38.

ಪ್ರತಿಷ್ಠಿತ ಸರಸ್ವತೀ ಸಮ್ಮಾನ್ ಪ್ರಶಸ್ತಿಗೆ ಪುರಸ್ಕೃತರಾದ ಕನ್ನಡದ ಮೊದಲ ಸಾಹಿತಿ ಯಾರು ?

**ಎಸ್ ಎಲ್ ಭೈರಪ್ಪ**

39.

ಮ್ಯಾಗ್ಸೆಸ್ಸೇ ಪ್ರಶಸ್ತಿಗೆ ಪುರಸ್ಕೃತರಾದ ಮೊದಲ ಕನ್ನಡಿಗರು ಯಾರು ?

**ಕೆ.ವಿ.ಸುಬ್ಬಣ್ಣ**

40.

ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಪಾತ್ರರಾದ ಮೊದಲ ಕನ್ನಡಿಗರು ಯಾರು?

**ವಿ ಶಾಂತರಾಮ್**

41.

ಕರ್ನಾಟಕದ ಪ್ರಥಮ ರಾಷ್ಟ್ರಕವಿ ಯಾರು ?

**ಎಂ ಗೋವಿಂದ ಪೈ**

42.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಸಾಹಿತಿ ಯಾರು?

**ಕುವೆಂಪು**

43.

ಕಾಳಿದಾಸ್ ಸಮ್ಮಾನ್ ಪ್ರಶಸ್ತಿಗೆ ಪಾತ್ರರಾದ ಮೊದಲ ಕನ್ನಡಿಗರು ಯಾರು ?

**ಮಲ್ಲಿಕಾರ್ಜುನ ಮನ್ಸೂರ್**

44.

ಕಬೀರ್ ಸಮ್ಮಾನ್ ಪ್ರಶಸ್ತಿಗೆ ಪಾತ್ರರಾದ ಮೊದಲ ಕನ್ನಡಿಗರು ಯಾರು ?

**ಗೋಪಾಲಕೃಷ್ಣ ಅಡಿಗ**

45.

ಜಮನ್ ಲಾಲ್ ಪ್ರಶಸ್ತಿಗೆ ಪಾತ್ರರಾದ ಮೊದಲ ಕನ್ನಡಿಗರು ಯಾರು ?

**ತಗಡೂರು ರಾಮಚಂದ್ರರಾವ್**

46.

ಪಂಪ ಪ್ರಶಸ್ತಿ ಪಡೆದ ಮೊದಲ ಸಾಹಿತಿ ಯಾರು ?

**ಕುವೆಂಪು**

47.

ಶಾಂತಲಾ ನಾಟ್ಯ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಡಾ ಕೆ ವೆಂಕಟಲಕ್ಷಮ್ಮ**

48.

ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಉಸ್ತಾದ್ ಬಿಸ್ಮಿಲ್ಲಾಖಾನ್**

49.

ಡಾ. ಗುಬ್ಬಿವೀರಣ್ಣ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಡಾ, ರಾಜ್ ಕುಮಾರ್**

50.

ಕನಕ ಪುರಂದರ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ವಿದ್ವಾನ್ ತಿಟ್ಟೆ ಕೃಷ್ಣಯ್ಯಂಗಾರ್**

51.

ಶ್ರೀ ಜಾನಪದಶ್ರೀ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಡಾ ಎಸ್ ಕೆ ಕರೀಂಖಾನ್**

52.

ಶ್ರೀ ಶಿಶು ಸಂತನಾಳ ಶರೀಫ್ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಶ್ರೀಮತಿ ಜಯಂತಿ ದೇವಿ**

53.

ಜಕಣಾಚಾರಿ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಸಿ ಪರಮೇಶ್ವರಾಚಾರ್ಯ**

54.

ದಾನಚಿಂತಾಮಣಿ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಶ್ರೀಮತಿ ಟಿ ಸುನಂದಮ್ಮ**

55.

ಶ್ರೀ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಡಾ ಕೆ ಕೆ ಹೆಬ್ಬಾರ್**

56.

ಡಾ ರಾಜ್‌ಕುಮಾರ್ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

**ಶ್ರೀ ಕೆ ಎಸ್ ಅಶ್ವಥ್**

57.

ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯ ಮೊದಲ ಪುರಸ್ಕೃತರು ಯಾರು ?

ಹುಣಸೂರು ಕೃಷ್ಣಮೂರ್ತಿ

58.

ಟಿ ಎಸ್ ಆರ್ ಪ್ರಶಸ್ತಿಯನ್ನು ಪ್ರಥಮವಾಗಿ ಪಡೆದ ಪತ್ರಕರ್ತರು ಯಾರು ?

**ಡಾ ಪಾಟೀಲ್ ಪುಟ್ಟಪ್ಪ**

59.

ಪುಸ್ತಕ ಪ್ರಕಾಶನಕ್ಕೆ ಪದ್ಮಶ್ರೀ ಪಡೆದ ಮೊದಲ ಕನ್ನಡಿಗ ಯಾರು ?

**ಜಿ.ಬಿ.ಜೋಷಿ**

60.

ರಾಷ್ಟ್ರಮಟ್ಟದ ಗೋಯಂಕ ಪ್ರಶಸ್ತಿಯನ್ನು ಮೊದಲು ಪಡೆದ ಕನ್ನಡ ಪತ್ರಿಕೋದ್ಯಮಿ ಯಾರು ?

**ಪಾ ವೆಂ ಆಚಾರ್ಯ**

61.

ಕರ್ನಾಟಕರತ್ನ ಪ್ರಶಸ್ತಿ ಮೊದಲ ಪಡೆದ ಕವಿ ಯಾರು ?

**ಕುವೆಂಪು**

62.

ಕನ್ನಡದ ಮೊದಲ ಗದ್ಯ ಬರಹಯಾವುದು ?

**ವಡ್ಡಾರಾಧನೆ**

63.

ಕನ್ನಡದ ಮೊದಲ ಮಹಾಕಾವ್ಯ ಯಾವುದು ?

**ಆದಿ ಪುರಾಣ (ಪಂಪ)**

64.

ಕನ್ನಡದ ಮೊದಲ ಕೃತಿ ಯಾವುದು ?

**ಕವಿರಾಜ ಮಾರ್ಗ**

65.

ಕನ್ನಡದ ಮೊದಲ ಶಾಸನ ಯಾವುದು ?

**ಹಲ್ಮಿಡಿ ಶಾಸನ (ಕ್ರಿ ಶ 450)**

66.

ಕನ್ನಡದಲ್ಲಿ ವೈದ್ಯ ಪದಕೋಶವನ್ನು ರಚಿಸಿದ ಮೊದಲಿಗರು ಯಾರು ?

**ಡಾ ಡಿ ಎಸ್ ಶಿವಪ್ಪ**

67.

ಕನ್ನಡದ ಪ್ರಪ್ರಥಮ ಭಾವಗೀತೆಗಳ ಧ್ವನಿ ಸುರಳಿ ಯಾವುದು?

**ನಿತ್ಯೋತ್ಸವ (ಶ್ರೀ ನಿಸಾರ್ ಅಹಮದ್ ರವರ ಕವನಗಳು)**

68.

ಕನ್ನಡದ ಮೊದಲ ಕಾದಂಬರಿಗಾರ್ತಿ ಯಾರು ?

**ತಿರುಮಲಾಂಬ**

69.

ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿದ ಮೊದಲ ನಗರ ಯಾವುದು ?

**ಬೆಂಗಳೂರು**

70.

ಕನ್ನಡದ ಮೊದಲ ಪ್ರಬಂಧ ಸಂಕಲನ ಯಾವುದು ?

**ಲೋಕ ರಹಸ್ಯ (1898)**

71.

ಕನ್ನಡದ ಮೊದಲ ವಿಮರ್ಶಾ ಕೃತಿ ಯಾವುದು ?

**ಕವಿ ಚಕ್ರವರ್ತಿರನ್ನ**

72.

ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ ಯಾವುದು ?

**ಜಾತಕ ತಿಲಕ**

73.

ಕನ್ನಡದ ಮೊದಲ ವ್ಯಾಕರಣ ಗ್ರಂಥ ಯಾವುದು ?

**ಶಬ್ಧ ಮಣಿದರ್ಪಣ**

74.

ಕನ್ನಡದ ಮೊದಲ ಮಕ್ಕಳ ವಿಶ್ವಕೋಶ ಯಾವುದು ?

**ಬಾಲ ಪ್ರಪಂಚ**

75.

ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಯಾವುದು ?

**ಇಂದಿರಾ ಬಾಯಿ**

76.

ಕನ್ನಡದ ಮೊದಲ ವಚನಗಾರ್ತಿ ಯಾರು ?

**ಅಕ್ಕಮಹಾದೇವಿ**

77.

ಕನ್ನಡದ ಮೊದಲ ಗೀತ ನಾಟಕ ಯಾವುದು ?

**ಮುಕ್ತದ್ವಾರ**

78.

ಕರ್ನಾಟಕದ ಮೊದಲ ವಿಶ್ವವಿದ್ಯಾಲಯ ಯಾವುದು ?

**ಮೈಸೂರು**

79.

ಕನ್ನಡದ ಮೊದಲ ಏಕವ್ಯಕ್ತಿ ನಾಟಕ ಯಾವುದು ?

**ಟಿಪಿಕಲ್ ಟಿ ಪಿ ಕೈಲಾಸಂ**

80.

ಕನ್ನಡದ ಮೊದಲ ತ್ರಿಪದಿ ಇರುವ ಶಾಸನ ಯಾವುದು ?

**ಬಾದಾಮಿ ಶಾಸನ**

81.

ಕರ್ನಾಟಕದ ಪ್ರಥಮ ದೇವಾಲಯ ಯಾವುದು ?

**ತಾಳಗುಂದದ ಪ್ರಣವೇಶ್ವರ ದೇವಾಲಯ**

82.

ಕನ್ನಡದಲ್ಲಿ ಮೊದಲು ಕಥೆ ಬರೆದವರು ಯಾರು ?

**ಪಂಜೆ ಮಂಗೇಶರಾಯರು**

83.

ಕನ್ನಡದ ಮೊದಲ ಪತ್ರಿಕೆ ಯಾವುದು ?

**ಮಂಗಳೂರು ಸಮಾಚಾರ್**

84.

ಕನ್ನಡದ ಮೊದಲ ಛಂದಶಾಸ್ತ್ರ ಗ್ರಂಥ ಯಾವುದು ?

**ಛಂದೋಂಬುಧಿ**

85.

ಕನ್ನಡದ ಮೊದಲ ವೈದ್ಯ ಗ್ರಂಥ ಯಾವುದು ?

**ಗೋವೈದ್ಯ ( ಕೀರ್ತಿವರ್ಮ )**

86.

ಕನ್ನಡದ ಮೊದಲನೆಯ ಅಭಿನಂದನಾ ಗ್ರಂಥ ಯಾವುದು ?

**ಸಂಭಾವನೆ ( ಬಿ.ಎಂ.ಶ್ರೀ.ಯವರಿಗೆ )**

87.

ಕರ್ನಾಟಕದ ಮೊದಲ ಸ್ಥಾಪಿತಗೊಂಡ ಬ್ಯಾಂಕ್ ಯಾವುದು ?

**ಚಿತ್ರದುರ್ಗ ಬ್ಯಾಂಕ್ ಲಿ**

88.

ಕರ್ನಾಟಕದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸಿದ ಮೊದಲ ಜಿಲ್ಲೆ ಯಾವುದು?

**ದಕ್ಷಿಣ ಕನ್ನಡ ಜಿಲ್ಲೆ**

89.

ಕರ್ನಾಟಕದ ಪ್ರಥಮ ಅಣು ವಿದ್ಯುದಾಗಾರ ಯಾವುದು ?

**ಕೈಗಾ (ಉತ್ತರ ಕನ್ನಡ)**

90.

ಕರ್ನಾಟಕದ ಪ್ರಥಮ ಜಲವಿದ್ಯುದಾಗಾರ ಯಾವುದು ?

**ಶಿವನಸಮುದ್ರ**

91.

ಕರ್ನಾಟಕದ ಪ್ರಥಮ ಶಾಖೋತ್ಪನ್ನ ವಿದ್ಯುದಾಗಾರ ಯಾವುದು ?

**ರಾಯಚೂರು**

92.

ರಾಜ್ಯ ಸರಕಾರದ ಸಬ್ಸಿಡಿ ಪಡೆದ ಮೊದಲ ಚಲನಚಿತ್ರ ಯಾವುದು ?

**ನಕ್ಕರೆ ಅದೇ ಸ್ವರ್ಗ (1967)**

93.

ಅರ್ಜುನ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ಆಟಗಾರ್ತಿ ಯಾರು?

**ಶಾಂತರಂಗಸ್ವಾಮಿ**

94.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿಜೇತರಾದ ಮೊದಲ ಕನ್ನಡಿಗರು ಯಾರು ?

**ಪ್ರಕಾಶ್ ಪಡುಕೋಣೆ**

95.

ಭಾರತದ ಹಾಕಿ ತಂಡದ ನಾಯಕರಾಗಿದ್ದ ಮೊದಲ ಕನ್ನಡಿಗ ಯಾರು ?

**ಪಿ ಎಂ ಗಣೇಶ್**

96.

ಭಾರತ ಮಹಿಳಾ ಕಿಕ್ರೆಟ್‌ನ ಪ್ರಥಮ ನಾಯಕಿ ಕನ್ನಡದವರು. ಆ ಆಟಗಾರ್ತಿ ಯಾರು ?

**ಶಾಂತಾರಂಗಸ್ವಾಮಿ**

97.

ರಜತೋತ್ಸವ ಕಂಡ ಕನ್ನಡದ ಮೊದಲ ಚಲನಚಿತ್ರ ಯಾವುದು ?

**ಜಗನ್ಮೋಹಿನಿ**

98.

ಕನ್ನಡ ನಾಡಿನ ಮೊದಲ ಚಿತ್ರಮಂದಿರ ಯಾವುದು ?

**ಪ್ಯಾರಾಮೌಂಟ್**

99.

ಕಾದಂಬರಿ ಆಧಾರಿತ ಕನ್ನಡದ ಪ್ರಥಮ ಚಲನಚಿತ್ರ ಯಾವುದು ?

**ಕರುಣೆಯೇ ಕುಟುಂಬದ ಕಣ್ಣು (ಧರ್ಮದೇವತೆ)**

100.

ವಿದೇಶದಲ್ಲಿ ಚಿತ್ರೀಕರಣಗೊಂಡ ಮೊದಲ ಕನ್ನಡ ಚಲನಚಿತ್ರ ಯಾವುದು ?

**ಸಿಂಗಾಪುರದಲ್ಲಿ ರಾಜಾಕುಳ್ಳ**

101.

ಚಲನಚಿತ್ರ ಹಿನ್ನೆಲೆ ಗಾಯನಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ–ಗಾಯಕ ಯಾರು ?

**ಶಿವಮೊಗ್ಗ ಸುಬ್ಬಣ್ಣ**

102.

ಕನ್ನಡದ ಮೊದಲ ಐತಿಹಾಸಿಕ ಚಲನಚಿತ್ರ ಯಾವುದು ?

**ರಣಧೀರ ಕಂಠೀರವ**

103.

ಕನ್ನಡ ಚಲನಚಿತ್ರವನ್ನು ನಿರ್ಮಿಸಿದ ಮೊದಲ ನಿರ್ಮಾಪಕಿ ಯಾರು ?

**ಎಂ ವಿ ರಾಜಮ್ಮ**

104.

ಚಲನಚಿತ್ರ ಗೀತರಚನೆಗೆ ರಾಷ್ಟ್ರ ಪುರಸ್ಕಾರ ಪಡೆದ ಕನ್ನಡದ ಮೊದಲ ಸಾಹಿತಿ ಯಾರು ?

**ಕೆ ಎಸ್ ನರಸಿಂಹಸ್ವಾಮಿ**

105.

ಮೊದಲ ಚಿತ್ರದ ನಟನೆಗೆ ಅಂತರರಾಷ್ಟ್ರೀಯ ಪುರಸ್ಕಾರ ಪಡೆದ ಕನ್ನಡಿಗ–ನಟ ಯಾರು ?

**ಶಂಕರ್‌ನಾಗ್**

106.

ನಾಯಕ ನಟನಾಗಿ 100 ಚಿತ್ರಗಳನ್ನು ಪೂರೈಸಿದ ಕನ್ನಡದ ಮೊದಲ ನಟ ಯಾರು ?

**ಡಾ. ರಾಜ್‌ಕುಮಾರ್**

107.

ಸ್ಲೋ ಮೋಶನ್ ಕ್ಯಾಮರದಲ್ಲಿ ಹಾಡೊಂದು ಚಿತ್ರೀಕರಣಗೊಂಡ ಮೊದಲ ಕನ್ನಡ ಚಿತ್ರ ಯಾವುದು ?

**ಶ್ರೀ ಪುಟ್ಟಣ್ಣ ಕಣಗಾಲ್ ರವರ ನಾಗರಹಾವು**

108.

ವಿದೇಶಿ ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಮೊದಲ ಚಲನಚಿತ್ರ ಯಾವುದು ?

**ನಾಂದಿ**

109.

ಕೇವಲ ಎರಡೇ ಪಾತ್ರಗಳಲ್ಲಿ ಚಿತ್ರಿಸಿದ ಕನ್ನಡದ ಮೊದಲ ಚಲನಚಿತ್ರ ಯಾವುದು ?

**ಶೃಂಗಾರ ಮಾಸ (1984)**

110.

ಕನ್ನಡ ಚಿತ್ರರಂಗದಲ್ಲಿ ಪ್ರದರ್ಶಿತಗೊಂಡ ಮೊದಲ ಸಿನಿಮಾ ಸ್ಕೋಪ್ ಚಲನಚಿತ್ರ ಯಾವುದು ?

**ಸೊಸೆ ತಂದ ಸೌಭಾಗ್ಯ**

111.

ಕನ್ನಡ ಚಲನಚಿತ್ರರಂಗದಲ್ಲಿ ತೆರೆಕಂಡ ಮೊದಲ ಮೂಕಿ ಚಿತ್ರಯಾವುದು ?

**ಮೃಚ್ಛಕಟಿಕ**

112.

ಕನ್ನಡದ ಮೊದಲ ವಾಕ್ಚಿತ್ರ ಯಾವುದು ?

**ಸತಿಸುಲೋಚನ**

113.

ರಾಷ್ಟ್ರಪತಿಗಳ ಸ್ವರ್ಣಕಮಲ ಪ್ರಶಸ್ತಿ ಪಡೆದ ಮೊದಲ ಕನ್ನಡ ಚಲನಚಿತ್ರ ಯಾವುದು ?

**ಸಂಸ್ಕಾರ (1970)**

114.

ಹಿನ್ನೆಲೆ ಸಂಗೀತಕ್ಕಾಗಿ ಎರಡು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಯಾರು ?

**ಶ್ರೀ ಬಿ ವಿ ಕಾರಂತ (ಋಷ್ಯಶೃಂಗ ಮತ್ತು ಘಟಶ್ರಾದ್ಧ)**

115.

ಪ್ರಸಾದನವೇ (ಮೇಕಪ್) ಇಲ್ಲದೇ ತಯಾರಾದ ಕನ್ನಡ ಮೊದಲ ಚಿತ್ರ ಯಾವುದು ?

**ಎಂದೂ ನಿನ್ನವನೆ**

1.

ಕೆನರಾ ಬ್ಯಾಂಕ್ ಸಂಸ್ಥೆಯ ಸಂಸ್ಥಾಪಕರು ಯಾರು ?

ಅಮ್ಮೆಂಬಳ್ ಸುಬ್ಬರಾವ್ ಪೈ

2.

ಕರ್ನಾಟಕದಲ್ಲಿ ಗುಹಾಂತರ ದೇವಾಲಯಗಳು ಎಲ್ಲಿವೆ ?

ಬಾದಾಮಿ

3.

ಛತ್ರಪತಿ ಶಿವಾಜಿಯವರ ತಂದೆ ಷಹಜಿಯವರ ಸಮಾಧಿ ಕರ್ನಾಟಕದಲ್ಲಿ ಎಲ್ಲಿದೆ ?

ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮ

4.

'ಸಿರಿಗನ್ನಡಂ ಗೆಲ್ಗೆ' ಈ ಘೋಷಣೆಯನ್ನು ರೂಪಿಸಿದವರು ಯಾರು ?

ಶ್ರೀ ರಾ ಹ ದೇಶಪಾಂಡೆ

5.

ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಯಾವ ಪ್ರದೇಶವನ್ನು ಕರೆಯಲಾಗುತ್ತದೆ ?

ವಿಧುರಾಶ್ವಥ (ಚಿಕ್ಕಬಳ್ಳಾಪುರ ಜಿಲ್ಲೆ)

6.

ಮಲ್ಲಿಗೆಯ ಕವಿ ಶ್ರೀ ಕೆ ಎಸ್ ನರಸಿಂಹಸ್ವಾಮಿಯವರ ಹುಟ್ಟೂರು ಯಾವುದು?

ಕಿಕ್ಕೇರಿ

7.

'ಒನ್ ಮೋರ್ ಓವರ್' ಇದು ಕರ್ನಾಟಕದ ಯಾವ ಕ್ರಿಕೆಟ್ ಆಟಗಾರನ ಆತ್ಮಕಥೆಯಾಗಿರುತ್ತದೆ ?

ಶ್ರೀ ಇ ಎ ಎಸ್ ಪ್ರಸನ್ನ

8.

ಕನ್ನಡವನ್ನು 'ವಿಶ್ವಲಿಪಿಗಳ ರಾಣಿ' ಎಂದು ಕರೆದವರು ಯಾರು ?

ಆಚಾರ್ಯ ವಿನೋಬಾ ಭಾವೆ

9.

ಯಾವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಇದುವರೆಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಲ್ಲ ?

ಶ್ರೀ ಗಿರೀಶ್ ಕಾರ್ನಾಡ್

10.

1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ ಗೀತೆಯನ್ನು ಹಾಡಿದವರು ಯಾರು ?

ಗಂಗೂಬಾಯಿ ಹಾನಗಲ್

11.

ಅನಿಲ್ ಕುಂಬ್ಳೆ ಯವರು ಯಾವ ದೇಶದ ವಿರುದ್ಧ ಒಂದೇ ಇನ್ನಿಂಗ್ಸ್ ನಲ್ಲಿ 10 ವಿಕೆಟ್‌ಗಳನ್ನು ಪಡೆದರು ?

ಪಾಕಿಸ್ತಾನ (1999)

12.

ಕರ್ನಾಟಕದಲ್ಲಿ ಪಂಚನದಿಗಳ ಜಿಲ್ಲೆ ಎಂದು ಹೆಸರಾದ ಜಿಲ್ಲೆ ಯಾವುದು ?

ವಿಜಯಪುರ (ಬಿಜಾಪುರ)

13.

ಕನ್ನಡದ 'ಕೊರವಂಜಿ' ಪತ್ರಿಕೆಯ ಮುಖಾಂತರ ಪರಿಚಿತವಾಗಿ, ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದ ವ್ಯಂಗ್ಯಚಿತ್ರಕಾರರು ಯಾರು ?

ಶ್ರೀ ಆರ್ ಕೆ ಲಕ್ಷ್ಮಣ್

14.

ಆದಿಕವಿ ಪಂಪನ ಜನ್ಮಸ್ಥಳ ಯಾವುದು ?

ಅಣ್ಣಿಗೇರಿ

15.

ಕರ್ನಾಟಕದಲ್ಲಿ ಅತಿ ಹೆಚ್ಚು ಪ್ರತಿಶತ ಕನ್ನಡ ಮಾತನಾಡುವ ಜಿಲ್ಲೆ ಯಾವುದು ?

ಮಂಡ್ಯ

**16.**

ಡಾ ರಾಜ್‌ಕುಮಾರ್ ಯಾವ ಚಲನಚಿತ್ರ ಗಾಯನಕ್ಕಾಗಿ ರಾಷ್ಟ್ರದ ಶ್ರೇಷ್ಠ ಹಿನ್ನೆಲೆಗಾಯಕ ಪುರಸ್ಕಾರವನ್ನು ಪಡೆದರು ?

ಜೀವನ ಚೈತ್ರ

**17.**

'ನಾನು ತಮಿಳ್ ಕನ್ನಡಿಗ, ಸರ್ ಮಿರ್ಜಾ ಇಸ್ಮಾಯಿಲ್ ಮುಸ್ಲಿಂ ಕನ್ನಡಿಗರು, ಆದರೆ ಅನಕೃ ರವರು ಶುದ್ಧ ಕನ್ನಡಿಗರು' ಈ ಮಾತುಗಳೊಂದಿಗೆ ಅನಕೃ ರವರ ಭಾಷಾಭಿಮಾನವನ್ನು ಬಣ್ಣಿಸಿದವರು ಯಾರು ?

ಮಾಸ್ತಿ ವೆಂಕಟೇಶ ಅಯ್ಯಂಗಾರ್

**18.**

ಗಾಂಧೀಜಿಯವರು ಹೊರತರುತ್ತಿದ್ದ ಹರಿಜನ ಪತ್ರಿಕೆಯ ಕನ್ನಡ ಆವೃತ್ತಿಯ ಪ್ರಕಟಣೆಯ ಜವಾಬ್ದಾರಿಯನ್ನು ಯಾರು ಹೊತ್ತಿದ್ದರು ?

ಸಿದ್ದವನಹಳ್ಳಿ ಕೃಷ್ಣಶರ್ಮ

**19.**

ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿ ಎಲ್ಲಿದೆ ?

ಬೈಲಹೊಂಗಲ

**20.**

ಶ್ರೀಮತಿ ಎಂ ಕೆ ಇಂದಿರಾ ರವರ ಮೊಟ್ಟ ಮೊದಲನೆಯ ಕಾದಂಬರಿಯ ಹಸ್ತಪ್ರತಿ ಪ್ರಕಾಶಕರ ಅಚಾತುರ್ಯದಿಂದ ಕಳೆದುಹೋಯಿತು. ಆದರೆ ಇಂದಿರಾರವರು ಚಿಂತಿಸದೆ, ಕೇವಲ 12 ದಿನಗಳಲ್ಲೇ ಮತ್ತೆ ಕಾದಂಬರಿಯ ಯಥಾವತ್ ಪ್ರತಿಯನ್ನು ಬರೆದು ಎಲ್ಲರನ್ನೂ ಬೆರಗಾಗಿಸಿದರು. 1963 ರಲ್ಲಿ ಪ್ರಕಟವಾದ ಈ ಕಾದಂಬರಿಯ ಹೆಸರೇನು ?

ತುಂಗಭದ್ರ

**21.**

ಹಳೇಬೀಡಿನ ಮೂಲ ಹೆಸರೇನು ?

ದೋರ ಸಮುದ್ರ

**22.**

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಹಕ್ಕಬುಕ್ಕರಿಗೆ ಪ್ರೇರಣೆ ನೀಡಿದವರು ಯಾರು?

ವಿದ್ಯಾರಣ್ಯರು

**23.**

ನವರಾತ್ರಿಕಾಲದಲ್ಲಿ ನವಮಿಯಂದು ಯಾವ ವೃಕ್ಷಕ್ಕೆ ಪೂಜೆಯನ್ನು ಸಲ್ಲಿಸಲಾಗುತ್ತದೆ?

ಶಮ್ಮಿ ಅಥವಾ  ಬನ್ನಿ ಮರ

**24.**

ಕರ್ನಾಟಕ ಸರಕಾರದಲ್ಲಿ ಕಾರ್ಯನಿರ್ವಹಿಸಿದ 11 ಉಪಮುಖ್ಯಮಂತ್ರಿಗಳಲ್ಲಿ, ನಾಲ್ವರು ಮುಖ್ಯ ಮಂತ್ರಿಗಳಾಗಿದ್ದಾರೆ. ಇವರಲ್ಲಿ ಮೊಟ್ಟ ಮೊದಲು ಮುಖ್ಯ ಮಂತ್ರಿಯಾಗಿದ್ದುಯಾರು ?

ಜೆ ಹೆಚ್ ಪಟೇಲ್

**25.**

ಭಾರತೀಯ ರೂಪಾಯಿ ಕರೆನ್ಸಿ ನೋಟ್ ಗಳಲ್ಲಿ, ಅದರ ಮುಖಬೆಲೆಯನ್ನು ಪ್ರಾದೇಶಿಕ ಭಾಷೆಗಳಲ್ಲಿ  ಒಂದರ ಕೆಳಗೊಂದರಂತೆ ಬರೆಯಲಾಗಿದೆ. ಇದರಲ್ಲಿ ಕನ್ನಡ ಭಾಷೆ ಎಷ್ಟನೇ ಸಾಲಿನಲ್ಲಿದೆ ?

ನಾಲ್ಕನೆಯ ಸಾಲು

**26.**

ಪೋರ್ಚುಗೀಸರನ್ನು ಸೋಲಿಸಿದ ಕನ್ನಡದ ರಾಣಿ ಯಾರು ?

ರಾಣಿ ಅಬ್ಬಕ್ಕ

**27.**

ನೇತ್ರಾವತಿ ನದಿಯ ಉಗಮ ಸ್ಥಾನ ಯಾವುದು ?

ಸಂಸೆ (ಚಿಕ್ಕಮಗಳೂರು ಜಿಲ್ಲೆ)

**28.**

ಹಸಿದು ಬಸವಳಿದ  ಹೊಯ್ಸಳ ರಾಜ ಮತ್ತವರ ಬೆಂಗಾವಲಿನವರಿಗೆ ಬೆಂದ ಕಾಳುಗಳನ್ನು ಊಟಕ್ಕಿಕ್ಕಿದ  ವೃದ್ದೆಯ ಜ್ಞಾಪಕಾರ್ಥವಾಗಿ ಕರೆದ ಹೆಸರು 'ಬೆಂದಕಾಳೂರು' ? ಈ ರಾಜನ ಹೆಸರೇನು ?

ವೀರ ಬಲ್ಲಾಳ–2

29.

ಏಪ್ರಿಲ್ 1, 2020 ರಿಂದ ಅನ್ವಯವಾಗುವಂತೆ ಕಾರ್ಪೋರೇಷನ್ ಬ್ಯಾಂಕ್ ಯಾವ ಬ್ಯಾಂಕ್‌ನೊಂದಿಗೆ ವಿಲೀನವಾಯಿತು ?

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

30.

ಕಿತ್ತೂರು ರಾಣಿ ಚೆನ್ನಮ್ಮನ ಬಲಗೈ ಬಂಟನಾಗಿದ್ದ ವೀರ ಸಂಗೊಳ್ಳಿ ರಾಯಣ್ಣನನ್ನು ಮರಣದಂಡನೆಯಾಗಿ ಯಾವ ಹಳ್ಳಿಯಲ್ಲಿ ಗಲ್ಲುಕಂಬಕ್ಕೇರಿಸಲಾಯಿತು ?

ನಂದಗಡ (ಬೆಳಗಾವಿ ಜಿಲ್ಲೆ)

31.

ಅನುಭವ ಮಂಟಪವನ್ನು ಸ್ಥಾಪಿಸಿದವರು ಯಾರು ?

ಬಸವಣ್ಣ

32.

ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಪುಟ್ಟಣ್ಣ ಕಣಗಾಲ್ ರವರು ಚಿತ್ರವೊಂದರ ಚಿತ್ರೀಕರಣಕ್ಕೆ ಸ್ಥಳಗಳನ್ನು ಆಯ್ಕೆಮಾಡಲು ಕಾರಿನ ವ್ಯವಸ್ಥೆಯನ್ನು ಮಾಡಲು ಚಿತ್ರ ನಿರ್ಮಾಪಕರು ಒಪ್ಪದೇ ಇದ್ದಾಗ, ಸ್ವತಃ ಪುಟ್ಟಣ್ಣ ನವರೇ ಬಾಡಿಗೆ ಸೈಕಲ್ ಏರಿ, ತಿರುಗಾಡಿ ಚಿತ್ರೀಕರಣದ ಸ್ಥಳಗಳನ್ನು ನಿರ್ಧರಿಸಿದರಂತೆ. ಪುಟ್ಟಣ್ಣರವರು ನಿರ್ದೇಶಿಸಿದ ಆ ಚಿತ್ರ ಯಾವುದು ?

ಬೆಳ್ಳಿಮೋಡ

33.

ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆಗಳಲ್ಲಿ , ಎಂಟು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡ ಕನ್ನಡ ಭಾಷೆಗೆ ಎಷ್ಟನೇ ಸ್ಥಾನವಿದೆ ?

ಎರಡನೆಯ ಸ್ಥಾನ ಹಿಂದಿ ಭಾಷೆಗೆ ಪ್ರಥಮ ಸ್ಥಾನ (11 ಬಾರಿ)

34.

ಸಾವಿರ ಕಂಬಗಳ ಬಸದಿ ಎಲ್ಲಿದೆ ?

ಮೂಡಬಿದರೆ

35.

ಅಕ್ಕಮಹಾದೇವಿಯವರ ಅಂಕಿತನಾಮ ಯಾವುದು ?

ಚೆನ್ನ ಮಲ್ಲಿಕಾರ್ಜುನ

**36.**

ಧರ್ಮಸ್ಥಳದ ಹಿಂದಿನ ಹೆಸರೇನು ?

ಕುಡುಮ

**37.**

ಹಾಸ್ಯ ಬ್ರಹ್ಮ ಬೀಚಿಯವರು ಕನ್ನಡದಲ್ಲಿ ಬರೆಯುವುದಿರಲಿ, ಕನ್ನಡ ಪುಸ್ತಕವನ್ನು ಓದುವುದೂ ಅವಮಾನ ಎಂದು  ಭಾವಿಸಿದ್ದರಂತೆ. ಇಂತಹ ಬೀಚಿಯವರನ್ನು ಕನ್ನಡ ಸಾಹಿತ್ಯ ಜಗತ್ತಿಗೆ ಆಕರ್ಷಣೆ ಮಾಡಿದ ಕನ್ನಡ ಕೃತಿ ಯಾವುದು ? ಅದರ ಲೇಖಕರು ಯಾರು ?

ಸಂಧ್ಯಾರಾಗ (ಅ ನ ಕೃಷ್ಣರಾಯರ ಕೃತಿ)

**38.**

ತರಾಸು ರವರ ಎಷ್ಟು ಕಾದಂಬರಿಗಳನ್ನು ಸೇರಿಸಿ, ಪುಟ್ಟಣ್ಣ ಕಣಗಾಲ್ ರವರು ನಾಗರಹಾವು ಚಿತ್ರವನ್ನು ನಿರ್ಮಿಸಿದರು ?

ಮೂರು (ಸರ್ಪಮತ್ಸರ, ಎರಡು ಹೆಣ್ಣು ಒಂದು ಗಂಡು, ನಾಗರಹಾವು)

**39.**

ತಲಕಾಡಿನ ಗಂಗರ ರಾಜ ಲಾಂಛನ ಯಾವುದಾಗಿತ್ತು ?

ಮದಗಜ

**40.**

ಜೋಗಕ್ಕೆ ಭೇಟಿಯಿತ್ತಾಗ ಜೋಗ ಜಲಪಾತವನ್ನು ನೋಡಿ "ಎಂತಹ ವ್ಯರ್ಥ" ಎಂದು ಉದ್ಗರಿಸಿದವರು ಯಾರು ?

ಸರ್ ಎಂ ವಿಶ್ವೇಶ್ವರಯ್ಯ

**41.**

ಕನ್ನಂಬಾಡಿ ಅಣೆಕಟ್ಟು ಕಟ್ಟುವಾಗ ತೀವ್ರ ಹಣದ ಕೊರತೆಯಾದಾಗ ಯಾವ ಮೈಸೂರಿನ ಅರಸರು ತಮ್ಮ ಖಾಸಗಿ ಭಂಡಾರದಿಂದ ಚಿನ್ನ, ವಜ್ರ ಮತ್ತು ವೈಢೂರ್ಯಗಳನ್ನು ಮಾರಿ, ಹಣ ತಂದು, ಅಣೆಕಟ್ಟು ನಿರ್ಮಾಣದ  ಕಾರ್ಯದಲ್ಲಿ ನೆರವಾದರು ?

ನಾಲ್ವಡಿ ಕೃಷ್ಣರಾಜ ಒಡೆಯರ್

ಕರ್ನಾಟಕ ರಸಪ್ರಶ್ನೆಗಳು

42.

ಸುಮಾರು 50 ವರ್ಷಗಳಿಂದ ಮೈಸೂರಿನಿಂದ ಪ್ರಕಟವಾಗುತ್ತಿರುವ ಸಂಸ್ಕೃತ ಭಾಷೆಯ ದಿನಪತ್ರಿಕೆಯ ಹೆಸರೇನು ?

ಸುಧರ್ಮಾ

43.

ಕುವೆಂಪು ಬರೆದ ಇಂಗ್ಲೀಷ್ ಕವನಗಳನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸಿದ ಐರಿಷ್ ಕವಿಯೊಬ್ಬರು, ಇಂಗ್ಲೀಷ್ ಬದಲು ತಮ್ಮ ಮಾತೃಭಾಷೆ ಕನ್ನಡದಲ್ಲಿಯೇ ಬರೆಯುವಂತೆ ಕುವೆಂಪುರವರನ್ನು ಪ್ರೇರೇಪಿಸಿದರು. ಆ ಐರಿಷ್ ಕವಿ ಯಾರು?

ಜೇಮ್ಸ್ ಕಸಿನ್ಸ್

44.

ಮಹಾತ್ಮಾ ಗಾಂಧೀಜಿಯವರ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರು ಯಾರು ?

ಮೈಲಾರ ಮಹಾದೇವಪ್ಪನವರು

45.

ಕಿರುತೆರೆಯಲ್ಲಿ ಪ್ರಸಾರವಾದ ಧಾರವಾಹಿಗಳ ಹತ್ತು ಸಾವಿರಕ್ಕೂ ಹೆಚ್ಚು ಕಂತುಗಳಿಗೆ ಸಂಭಾಷಣೆಯನ್ನು ಬರೆದು ದಾಖಲೆ ನಿರ್ಮಿಸಿದ ಕನ್ನಡದ ಹಾಸ್ಯ ಬರಹಗಾರ ಯಾರು ?

ಎಮ್ ಎಸ್ ನರಸಿಂಹಮೂರ್ತಿ

46.

ಕರ್ನಾಟಕದಲ್ಲಿ ಅತಿ ಕಡಿಮೆ ಸಾಕ್ಷರತೆ ಇರುವ ಜಿಲ್ಲೆ ಯಾವುದು ?

ಯಾದಗಿರಿ

47.

ಕುಕ್ಕೆ ಸುಬ್ರಮಣ್ಯ ಕ್ಷೇತ್ರವು ಯಾವ ನದಿಯ ತೀರದಲ್ಲಿದೆ ?

ಕುಮಾರಧಾರ ನದಿ

48.

ಲೋಕಮಾನ್ಯ ತಿಲಕರ 'ಗೀತಾ ರಹಸ್ಯ'ವನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು?

ಆಲೂರು ವೆಂಕಟರಾಯರು

**49.**

**ಉಡುಪಿ ಮಠ ಪರಂಪರೆಯಲ್ಲಿ ಎಷ್ಟು ಬಾರಿ ಪರ್ಯಾಯ ಸ್ವೀಕರಿಸಿದ ಶ್ರೇಯಸ್ಸು ವಿಶ್ವೇಶ ತೀರ್ಥ ಸ್ವಾಮೀಜಿಯವರಿಗೆ ಇದೆ ?**

**ಐದು ಬಾರಿ**

**50.**

**ಧರ್ಮಸ್ಥಳದಲ್ಲಿರುವ ಬೃಹದಾಕಾರದ ಏಕಶಿಲಾ ಗೋಮಟೇಶ್ವರನ ಕಲ್ಲಿನ ಬೃಹನ್ಮೂರ್ತಿಯ ಕೆತ್ತನೆ ಕಾರ್ಯ ಯಾವ ಶಿಲ್ಪಿಯ ನೇತೃತ್ವದಲ್ಲಿ ನಡೆಯಿತು ?**

**ರಂಜಾಳ ಗೋಪಾಲಕೃಷ್ಣ ಶೆಣೈ**

**51.**

**ಸಂವಿಧಾನದ ಕರಡು ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ ಕನ್ನಡಿಗ ಯಾರು?**

**ಬೆನೆಗಲ್ ನರಸಿಂಗರಾವ್**

**52.**

**ಭಾರತದ ಮೊದಲ ಆಕಾಶವಾಣಿ ಕೇಂದ್ರವು ಮೈಸೂರಿನಲ್ಲಿ ಯಾರಿಂದ ಪ್ರಾರಂಭವಾಯಿತು ?**

**ಡಾ ಎಂ ವಿ ಗೋಪಾಲಸ್ವಾಮಿ**

**53.**

**ಗದುಗಿನ ನಾರಣಪ್ಪನ 'ಕುಮಾರವ್ಯಾಸ ಭಾರತ' ಕೃತಿಯನ್ನು ಕೇವಲ ಎರಡು ರೂಪಾಯಿ ಬೆಲೆಗೆ ಓದುಗರಿಗೆ ಸಿಗುವಂತೆ ಮಾಡಿದ ಕರ್ನಾಟಕದ ಮುಖ್ಯ ಮಂತ್ರಿ ಯಾರು ?**

**ಕೆಂಗಲ್ ಹನುಮಂತಯ್ಯ**

**54.**

**ರಾಮಾಯಣದ ಕಾಲದಲ್ಲಿ ವಾಲಿ ಮಹಾರಾಜನ ರಾಜಧಾನಿ ಯಾವುದು ಇತ್ತು ಎಂಬ ಪ್ರತೀತಿ ಇದೆ ?**

**ಆನೇಗುಂದಿ**

**55.**

**ಕುವೆಂಪು ಅವರ ಆತ್ಮಕಥನ ಯಾವುದು?**

**ನೆನಪಿನ ದೋಣಿಯಲ್ಲಿ**

ಕನ್ನಡ ಸಾಹಿತ್ಯ ರಸಪ್ರಶ್ನೆಗಳು

56.

ಬೆಂಗಳೂರಿನ ರೈಲು ನಿಲ್ದಾಣಕ್ಕೆ ಯಾರ ಹೆಸರನ್ನು ಇಡಲಾಗಿದೆ ?

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

57.

ಕರ್ನಾಟಕದಲ್ಲಿ "ಪಂಚಾಯತ್ ರಾಜ್" ವ್ಯವಸ್ಥೆಯನ್ನು ಮೊದಲ ಬಾರಿಗೆ ತಂದ ಮುಖ್ಯಮಂತ್ರಿ ಯಾರು ?

ರಾಮಕೃಷ್ಣ ಹೆಗ್ಗಡೆ

58.

ಬಿಳಿಗಿರಿರಂಗನ ಬೆಟ್ಟದಲ್ಲಿನ ಸೋಲಿಗ ಬುಡಕಟ್ಟು ಜನಾಂಗದವರಿಗೆ ಸಲ್ಲಿಸಿದ ಸೇವೆಗಾಗಿ ಪರ್ಯಾಯ ನೊಬೆಲ್ ಪ್ರಶಸ್ತಿ ಎನ್ನಲಾದ 'ರೈಟ್ ಲೈವ್ಲಿಹುಡ್' ಪ್ರಶಸ್ತಿಗೆ ಪಾತ್ರರಾದವರು ಯಾರು ?

ಡಾ. ಹೆಚ್ ಸುದರ್ಶನ್

59.

ಕಾವೇರಿನದಿಯ ಪ್ರಮುಖ ಜಲಪಾತಗಳು ಮೂರು. ಅದರಲ್ಲಿ ಮೊದಲೆರಡು ಜಲಪಾತಗಳು ಚುಂಚನಕಟ್ಟೆ ಮತ್ತು ಹೊಗೇನಕಲ್. ಮೂರನೆಯ ಜಲಪಾತ ಯಾವುದು ?

ಶಿವನ ಸಮುದ್ರ (ಗಗನಚುಕ್ಕಿ ಮತ್ತು ಭರಚುಕ್ಕಿ)

60.

ಮಹಮದ್ ರಫಿಯವರು ಕನ್ನಡದ ಯಾವ ಚಲನಚಿತ್ರವೊಂದರಲ್ಲಿ ಹಾಡಿದ್ದಾರೆ ?

ಒಂದೇ ಬಳ್ಳಿಯ ಹೂವುಗಳು (ಹಾಡು: ನೀನೆಲ್ಲೀ ನಡೆವೆ ದೂರ ಎಲ್ಲೆಲ್ಲೂ ಲೋಕವೆ. ಈ ಲೋಕವೆಲ್ಲ ಘೋರ ಎಲ್ಲೆಲ್ಲೂ ಶೋಕವೆ )

61.

ಪ್ರಸಿದ್ಧ ನಗೆಗಾರ ರಾಶಿಯವರು ಪ್ರಕಟಿಸುತ್ತಿದ್ದ ಹಾಸ್ಯ ಪತ್ರಿಕೆ ಯಾವುದು ?

ಕೊರವಂಜಿ

62.

'ನಡೆದಾಡುವ ವಿಶ್ವಕೋಶ' ಎಂದು ಯಾರನ್ನು ಕರೆಯುತ್ತಾರೆ ?

ಶ್ರೀ ಶಿವರಾಮ ಕಾರಂತ

ಕರ್ನಾಟಕ ರಾಜ್ಯೋತ್ಸವ

**63.**

**1944 ರಲ್ಲಿ ಬಿಡುಗಡೆಯಾದ ಈ ಚಲನಚಿತ್ರದಲ್ಲಿ ಖ್ಯಾತ ಗಾಯಕರಾದ ಶ್ರೀ ಚೆಂಬೈ ವೈದ್ಯನಾಥ್ ಭಾಗವತರ್, ಪಿಟೀಲ್ ವಾದಕರಾದ ಪಿಟೀಲ್ ಚೌಡಯ್ಯ ಮತ್ತು ಮೃದಂಗ ಪಟು ಟಿ ಎಸ್ ಮಣಿಅಯ್ಯರ್ ರವರ ಅಪೂರ್ವ ಸಂಗೀತ ಕಛೇರಿಯನ್ನು ಚಿತ್ರೀಕರಿಸಲಾಗಿದೆ. ಪಿಟೀಲ್ ಚೌಡಯ್ಯನವರು ನಾಯಕನಾಗಿ ನಟಿಸಿದ್ದಾರೆ. ಇದು ಮುಸುರಿ ಕೃಷ್ಣಮೂರ್ತಿ ಮತ್ತು ಪಂಡರೀಬಾಯಿ ಅಭಿನಯದ ಮೊದಲ ಕನ್ನಡ ಚಲನಚಿತ್ರವೂ ಆಗಿದೆ. ಈ ಚಲನಚಿತ್ರ ಯಾವುದು?**

**ವಾಣಿ ಚಲನಚಿತ್ರ**

**64.**

**ಭಾರತದ ರಾಷ್ಟ್ರಾಧ್ಯಕ್ಷರಾದ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್ ರವರು ಮೈಸೂರು ಮಹಾರಾಜ ಕಾಲೇಜಿನಲ್ಲಿದ್ದಾಗ ಯಾವ ವಿಷಯವನ್ನು ಭೋದಿಸುತ್ತಿದ್ದರು?**

**ತತ್ವಶಾಸ್ತ್ರ**

**65.**

**1969 ರಲ್ಲಿ ಕರ್ನಾಟಕದ ತಳಹದಿಯ ಎಷ್ಟು ಬ್ಯಾಂಕ್‌ಗಳು ರಾಷ್ಟ್ರೀಕೃತಗೊಂಡವು?**

**2**

**66.**

**ಉಡುಪಿಯಲ್ಲಿ ಅಷ್ಟ ಮಠಗಳನ್ನು ಸ್ಥಾಪಿಸಿದರು ಯಾರು ?**

**ಶ್ರೀ ಮಧ್ವಾಚಾರ್ಯರು**

**67.**

**ಆಕಾಶವಾಣಿ ಪದವನ್ನು ಮೊದಲು ಸೂಚಿಸಿದವರು ಯಾರು ?**

**ಶ್ರೀ ನಾ ಕಸ್ತೂರಿ**

**68.**

**‘ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತದಲ್ಲಲ್ಲ, ಇಂಗ್ಲಿಷನಲ್ಲಲ್ಲ, ಹಿಂದಿಯಲ್ಲಲ್ಲ’ ಎಂದು ಹೇಳಿಕೆ ನೀಡಿದವರು ಯಾರು ?**

**ಶ್ರೀ ಬಿ ಎಂ ಶ್ರೀಕಂಠಯ್ಯ**

**69.**

**ಕಥಾ ಸಂಗಮ ಚಲನಚಿತ್ರದಲ್ಲಿ ಮೂರು ಸಣ್ಣ ಕಥೆಗಳನ್ನು ಅಳವಡಿಸಲಾಗಿದೆ ಅದರಲ್ಲಿ ಮೊದಲೆರಡು ಕಥೆಗಳು – ಹಂಗು ಮತ್ತು ಮುನಿತಾಯಿ.. ಮೂರನೆಯ ಕಥೆ ಯಾವುದು ?**

**ಅತಿಥಿ**

**70.**

**ಬಂಗಾರದ ಮನುಷ್ಯ ಚಲನಚಿತ್ರ ಎರಡು ವರುಷಗಳ ದಾಖಲೆ ಪ್ರದರ್ಶನವನ್ನು ಬೆಂಗಳೂರಿನ ಯಾವ ಚಿತ್ರಮಂದಿರದಲ್ಲಿ ಕಂಡಿತು ?**

**ಸ್ಟೇಟ್ಸ್ ಚಿತ್ರಮಂದಿರ (ಈಗ ಭೂಮಿಕಾ)**

**71.**

**ಜನ್ಮ ದಿನಾಂಕದ ದಿನವೇ ಮರಣಹೊಂದಿದ ಖ್ಯಾತ ಸುಗಮ ಸಂಗೀತ ಗಾಯಕರು ಯಾರು ?**

**ಶ್ರೀ ಸಿ ಅಶ್ವಥ್**

**72.**

**ಶ್ರೀ ಜಿ ಆರ್ ವಿಶ್ವನಾಥ್ ರವರು ತಮ್ಮ ಮೊದಲ ಟೆಸ್ಟ್‌ನಲ್ಲೇ ಯಾವ ದೇಶದ ವಿರುದ್ಧ ಶತಕ ಬಾರಿಸಿದರು ?**

**ಆಸ್ಟ್ರೇಲಿಯಾ**

**73.**

**1962 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಚುನಾಯಿಸಲ್ಪಟ್ಟರೂ, ಅದರ ಮುಖ್ಯಮಂತ್ರಿ ಬಿಂಬಿತ ಅಭ್ಯರ್ಥಿ ಹೊಸದುರ್ಗ ಕ್ಷೇತ್ರದಲ್ಲಿ ಪರಾಭವಗೊಂಡರು. ಆ ವ್ಯಕ್ತಿ ಯಾರು ?**

**ಎಸ್ ನಿಜಲಿಂಗಪ್ಪ**

**74.**

**ಕನ್ನಡದಲ್ಲಿ ಮೊದಲ ಬೆರಳಚ್ಚುವಿನ ಯಂತ್ರವನ್ನು ರೂಪಿಸಿದವರು ಯಾರು?**

**ಅನಂತ ಸುಬ್ಬರಾವ್**

**75.**

'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ಭಾರತ ಕಣ್ಣಲಿ ಕುಣಿಯುದು, ಮೈಯಲಿ ಮಿಂಚಿನ ಹೊಳೆತುಳುಕಾಡುವುದು' ಎಂದು ಕುಮಾರ ವ್ಯಾಸನನ್ನು ಹಾಡಿ ಹೊಗಳಿದವರು ಯಾರು ?

ರಾಷ್ಟ್ರಕವಿ ಕುವೆಂಪು

**76.**

ಸ್ವಾತಂತ್ರ್ಯ ಹೋರಾಟದಲ್ಲಿ ಶಿವಮೊಗ್ಗ ಜಿಲ್ಲೆಯ ಯಾವ ಹಳ್ಳಿಯು ತನ್ನನ್ನು ತಾನೇ 'ಸ್ವತಂತ್ರ ಹಳ್ಳಿ' ಎಂದು ಘೋಷಿಸಿಕೊಂಡಿತು ?

ಈಸೂರು

**77.**

ಶ್ರೀ ಎಸ್ ಎಲ್ ಭೈರಪ್ಪನವರ ಹುಟ್ಟೂರು ಯಾವುದು ?

ಸಂತೇಶಿವರ

**78.**

ತೆರಿಗೆಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಿ, ಆಡಳಿತದಲ್ಲಿ ಮಿತವ್ಯಯವನ್ನು ಸಾಧಿಸಿ ಖಜಾನೆಯಲ್ಲಿ ಒಂಬತ್ತು ಕೋಟಿ ಧನ ಕನಕಗಳನ್ನು ಸಂಗ್ರಹಿಸಿದ 'ನವಕೋಟಿ ನಾರಾಯಣ' ಎಂದು ಬಿರುದಾಂಕಿತರಾದ ಮೈಸೂರು ದೊರೆ ಯಾರು ?

ಚಿಕ್ಕದೇವರಾಯ ಒಡೆಯರ್ ರವರು

**79.**

'ಹಗಲು ಹರಿಯಿತು ಮುಗಿಲು ಕರೆಯಿತು ಏಳು ಪಯಣಿಗ ಎಚ್ಚರಾ ಗಾಳಿ ಬೀಸಿತು ಅಲೆಯು ತೂಗಿತು ದೋಣಿ ಸಾಗಿತು ದೂರಕೆ' ಇದು ಚಕ್ರತೀರ್ಥ ಚಲನಚಿತ್ರದ ಜನಪ್ರಿಯ ಹಾಡು. ಈ ಹಾಡಿನ ರಚನೆಕಾರರು ಯಾರು ?

ತರಾಸು

**80.**

ಕನ್ನಡ ಸಾಹಿತ್ಯಕ್ಕೆ ಸಮೃದ್ಧವಾದ ಕೊಡುಗೆಯನ್ನು ನೀಡಿದ ಬರಹಗಾರರೊಬ್ಬರನ್ನು ನೃಪತುಂಗ ಸಾಹಿತ್ಯ ಪ್ರಶಸ್ತಿ ಗೆ ಪರಿಗಣಿಸಲಾಗುತ್ತಿದ್ದು, ಇದನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಯಾವ ಸಂಸ್ಥೆಯ ಜೊತೆಗೂಡಿ ನೀಡುತ್ತಾ ಬಂದಿದೆ ?

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ ಎಮ್ ಟಿ ಸಿ)

ಕರ್ನಾಟಕದ ರಸಪ್ರಶ್ನೆಗಳು

81.

'ಹುಚ್ಚು ಮನಸಿನ ಹತ್ತು ಮುಖಗಳು' ಇದು ಯಾರ ಆತ್ಮಕಥೆ ?

ಶಿವರಾಮ ಕಾರಂತ

82.

ಕರ್ನಾಟಕದಲ್ಲಿ ಭೂಕಂಪ ಮಾಪನ ಕೇಂದ್ರ ಎಲ್ಲಿದೆ ?

ಗೌರಿಬಿದನೂರು

83.

"ಮಾಲಂಗಿ ಮಡುವಾಗಲಿ, ತಲಕಾಡು ಮರಳಾಗಲಿ, ಮೈಸೂರು ಅರಸರಿಗೆ ಮಕ್ಕಳಾಗದೇ ಇರಲಿ" ಎಂದು ಶಪಿಸಿ, ನೊಂದ ಮಹಿಳೆಯೊಬ್ಬಳು ಕಾವೇರಿ ಮಡಿಲಿಗೆ ಧುಮಿಕಿದಳೆಂಬ ಪ್ರತೀತಿ ಇದೆ. ಈ ಶಾಪ ಇತ್ತ ಮಹಿಳೆ ಯಾರು ?

ಅಲಮೇಲಮ್ಮ

84.

'ಬರಹಗಾರನ ಬದುಕು' ಇದು ಯಾವ ಖ್ಯಾತ ಸಾಹಿತಿಯ ಆತ್ಮಕಥೆ ?

ಅ ನ ಕೃಷ್ಣರಾಯರು

85.

ಮಂಡಗದ್ದೆ ಪಕ್ಷಿಧಾಮ ಯಾವ ಜಿಲ್ಲೆಯಲ್ಲಿದೆ ?

ಶಿವಮೊಗ್ಗ

86.

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರನ್ನು 'ಕನ್ನಡದ ಆಸ್ತಿ' ಎಂದು ಕರೆದವರು ಯಾರು ?

ವಿನಾಯಕಕೃಷ್ಣ ಗೋಕಾಕ್

87.

'ಭಿತ್ತಿ' ಇದು ಯಾವ ಖ್ಯಾತ ಸಾಹಿತಿಯ ಆತ್ಮಕಥೆ ?

ಶ್ರೀ ಎಸ್ ಎಲ್ ಭೈರಪ್ಪ

88.

ಕದಂಬ ರಾಜಮನೆತನದ ರಾಜಧಾನಿ ಯಾವುದು ?

ಬನವಾಸಿ

**89.**

ಕನ್ನಡ ಸಾಹಿತ್ಯ ಪರಿಷತ್ ಇದುವರೆಗೆ 85 ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿದ್ದು, ಯಾವ ಊರಿನಲ್ಲಿ ಅತಿ ಹೆಚ್ಚು ಸಮ್ಮೇಳನಗಳು ಜರುಗಿದೆ ?

ಮೈಸೂರು ಮತ್ತು ಬೆಳಗಾಂ ( ತಲಾ ಐದು ಬಾರಿ)

**90.**

ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡ ವಿದ್ವಾನ್ ಪರೀಕ್ಷೆಯನ್ನು ಕಟ್ಟಿದಾಗ, ತಾವೇ ಬರೆದ ಪುಸ್ತಕವನ್ನು ಪಠ್ಯಪುಸ್ತಕವಾಗಿ ಓದಿ ಪರೀಕ್ಷೆ ಬರೆಯಬೇಕಾಯಿತು. ಆ ಪುಸ್ತಕದ ಹೆಸರೇನು?

'ನಮ್ಮ ಊರಿನ ರಸಿಕರು'

**91.**

ವಿಶ್ವವಿಖ್ಯಾತ ಶ್ರವಣಬೆಳಗೊಳದ 57 ಅಡಿಯ ಗೋಮಟೇಶ್ವರ ಮೂರ್ತಿಯನ್ನು ಕೆತ್ತಿಸಿದವರು ಯಾರು ?

ಶ್ರೀ ಚಾವುಂಡರಾಯ

**92.**

ಹಿಂದೂ ದೇವಾಲಯಗಳ ವಾಸ್ತು ಶಿಲ್ಪದ ತೊಟ್ಟಿಲು ಎಂದು ಯಾವ ಊರನ್ನು ಕರೆಯುತ್ತಾರೆ ?

ಐಹೊಳೆ

**93.**

ಕರ್ನಾಟಕವು ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ವಿಸ್ತರಿಸಿತ್ತು ಎಂದು ಯಾವ ಕೃತಿಯಲ್ಲಿ ಉಲ್ಲೇಖಿಸಲಾಗಿದೆ ?

ಅಮೋಘವರ್ಷ ನೃಪತುಂಗನ ಆಸ್ಥಾನದ ಕವಿ ಶ್ರೀವಿಜಯನ "ಕವಿರಾಜಮಾರ್ಗ"

**94.**

1978 ರಲ್ಲಿ ಚಿಕ್ಕಮಂಗಳೂರಿನಲ್ಲಿ ನಡೆದ ಉಪ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರು ಯಾರ ವಿರುದ್ಧ ಸ್ಪರ್ಧಿಸಿ ಜಯ ಸಾಧಿಸಿದರು ?

ಶ್ರೀ ವಿರೇಂದ್ರ ಪಾಟೀಲ್

**95.**

ಬಸವಣ್ಣನವರು ಭಂಡಾರಿಯಾಗಿ ಯಾವ ರಾಜನಲ್ಲಿ ಸೇವೆ ಸಲ್ಲಿಸಿದರು ?

ಬಿಜ್ಜಳ

96.

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಎಂಟು ಖ್ಯಾತ ಸಾಹಿತಿಗಳಲ್ಲಿ ಏಳು ಸಾಹಿತಿಗಳು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಇವರಲ್ಲಿ ಮೊಟ್ಟ ಮೊದಲು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ಯಾರು ?

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್

97.

ಮೈಸೂರು ರಾಜ್ಯ 1973 ನವೆಂಬರ್ 1 ರಂದು ಕರ್ನಾಟಕ ಎಂದು ಮರುನಾಮಕರಣಗೊಂಡ ಅವಧಿಯಲ್ಲಿ ಯಾರು ಮುಖ್ಯಮಂತ್ರಿಯಾಗಿದ್ದರು ?

ಡಿ ದೇವರಾಜ ಅರಸ್

98.

ಲತಾ ಮಂಗೇಶ್ವರ್ ರವರು ಹಾಡಿರುವ 'ಬೆಳ್ಳನೆ ಬೆಳಗಾಯಿತು' ಯಾವ ಕನ್ನಡ ಚಲನಚಿತ್ರದ್ದು ?

ಸಂಗೊಳ್ಳಿ ರಾಯಣ್ಣ

99.

ದರೋಜಿ ಕರಡಿಧಾಮ ಯಾವ ಜಿಲ್ಲೆಯಲ್ಲಿದೆ ?

ಬಳ್ಳಾರಿ

100.

ಕುವೆಂಪು ರವರ ಮೊದಲ ಕಾವ್ಯ ಸಂಕಲನ 'ಕೊಳಲು' ಪುಸ್ತಕವನ್ನು ಪ್ರಕಟಿಸಿದವರು ಯಾರು ?

ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರು

101.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಅತೀ ದೀರ್ಘಕಾಲ ಆಡಳಿತ ನಡೆಸಿದವರು ಯಾರು ?

ಶ್ರೀ ಡಿ ದೇವರಾಜ ಅರಸ್

102.

102. ಮತದಾನ ಸಮಯದಲ್ಲಿ ಬಳಸುವ ಶಾಹಿ/ಇಂಕ್ ತಯಾರಿಸುವ ಘಟಕ ಕರ್ನಾಟಕದಲ್ಲಿ ಎಲ್ಲಿದೆ ?

ಮೈಸೂರು

**103.**

**ವಿಶ್ವಸಂಸ್ಥೆಯಲ್ಲಿ ಕನ್ನಡದಲ್ಲಿ ಮಾತನಾಡಿದ 'ಪ್ರಪ್ರಥಮ ಕನ್ನಡಿಗ' ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಯಾರು ?**

**ಮಾಜಿ ಕೇಂದ್ರ ಸಚಿವ ಅನಂತ್ ಕುಮಾರ್**

**104.**

**ಏಪ್ರಿಲ್ 1, 2020 ರಂದು ಸಿಂಡಿಕೇಟ್ ಬ್ಯಾಂಕ್ ಯಾವ ಬ್ಯಾಂಕ್ ನೊಂದಿಗೆ ವಿಲೀನವಾಯಿತು ?**

**ಕೆನರಾ ಬ್ಯಾಂಕ್**

**105.**

**ಜ್ಞಾನ ಪೀಠ ಪ್ರಶಸ್ತಿ ಪಡೆದ ಇಬ್ಬರು ಕನ್ನಡ ಸಾಹಿತಿಗಳು ಅದೇ ವರುಷ ಬೇರೆ ಭಾಷೆಯ ಸಾಹಿತಿಯೊಬ್ಬರ ಜೊತೆ ಜ್ಞಾನಪೀಠ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಅವರಲ್ಲಿ ಒಬ್ಬರು ಶ್ರೀ ಕುವೆಂಪು ರವರು. ಮತ್ತೊಬ್ಬ ಸಾಹಿತಿ ಯಾರು ?**

**ಶ್ರೀ ದ ರಾ ಬೇಂದ್ರೆ**

**106.**

**ನಾಡೋಜ ಪ್ರಶಸ್ತಿಯನ್ನು ಯಾವ ವಿಶ್ವವಿದ್ಯಾಲಯವು ನೀಡುತ್ತದೆ ?**

**ಹಂಪಿ**

**107.**

**ಕರ್ನಾಟಕ ರಾಜ್ಯದ ಯಾವ ನಗರದಲ್ಲಿ ದೂರದರ್ಶನ ಕೇಂದ್ರ ಪ್ರಸಾರ ಕಾರ್ಯ ಮೊದಲು ಆರಂಭಿಸಿತು ?**

**ಕಲ್ಬುರ್ಗಿ**

**108.**

**ಏಷ್ಯಾದ ಅತಿ ದೊಡ್ಡ ಸೋಲಾರ್ ಪಾರ್ಕ್ ಕರ್ನಾಟಕದಲ್ಲಿ ಎಲ್ಲಿದೆ ?**

**ಪಾವಗಡ**

**109.**

**ಕರ್ನಾಟಕದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿದ ಜಿಲ್ಲೆ ಯಾವುದು?**

**ವಿಜಯಪುರ**

**110.**

'ಹಸ್ತಕ್ಕೆ ಬರಿ ನಕ್ಕೆ ಓದುತ್ತ ಓದುತ್ತ
ಮಸ್ತಕಕ್ಕಿಟ್ಟು ಗಂಭೀರನಾದೆ ।
ವಿಸ್ತರದ ದರುಶನಕೆ ತುತ್ತತುದಿಯಲಿ ನಿನ್ನ
ಪುಸ್ತಕಕೆ ಕೈಮುಗಿದೆ ಮಂಕುತಿಮ್ಮ'
ಈ ಜನಪ್ರಿಯ ಸಾಲುಗಳು  ಯಾರ ರಚನೆಯಾಗಿದೆ ?

ಕುವೆಂಪು (ಮಂಕುತಿಮ್ಮನ ಕಗ್ಗ ವನ್ನು ಮೆಚ್ಚಿ ಶ್ರೀ ಕುವೆಂಪು ರವರು ಕಗ್ಗದ (ಮುಕ್ತಕ) ಮೂಲಕ ಅಭಿನಂದಿಸಿದ್ದಾರೆ)

**111.**

ಶ್ರವಣ ಬೆಳಗೊಳದ ಗೊಮ್ಮಟನ ಎತ್ತರ ಎಷ್ಟು (ಅಡಿಗಳಲ್ಲಿ ತಿಳಿಸಿ) ?

57 ಅಡಿಗಳು

**112.**

ಚೀನಾದ ಹುಯೆನ್ ತ್ಸಾಂಗ್ ರವರು ಯಾವ ಚಾಲುಕ್ಯ ದೊರೆಯ ಕಾಲದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದರು ?

ಇಮ್ಮಡಿ ಪುಲಕೇಶಿ

**113.**

1996 ರಲ್ಲಿ ತಮಗೆ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿಯಿಂದ ಬಂದ ಹಣವನ್ನು ಡಾ ರಾಜ್ ಕುಮಾರ್ ರವರು ಯಾವ ಸಂಸ್ಥೆಗೆ ಕೊಡುಗೆಯಾಗಿ ನೀಡಿದರು ?

ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

**114.**

'ಭಾವ' ಇದು ಯಾವ ಖ್ಯಾತ ಸಾಹಿತಿಯ ಆತ್ಮಕಥೆ ?

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್

**115.**

ಬೆಂಗಳೂರಿನಲ್ಲಿ ಸಾರ್ಕ್ ದೇಶಗಳ  ಸಮ್ಮೇಳನವಾದಾಗ ಕರ್ನಾಟಕದ ಅಂದಿನ ಮುಖ್ಯಮಂತ್ರಿ ಯಾರಾಗಿದ್ದರು ?

ರಾಮಕೃಷ್ಣ ಹೆಗ್ಗಡೆ

**116.**

ರೈಲು ಮಾರ್ಗ ಹೊಂದಿಲ್ಲದ ಏಕೈಕ ಜಿಲ್ಲೆ ಯಾವುದು ?

ಕೊಡಗು

**117.**

ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರು ನಡೆಸುತ್ತಿದ್ದ ಪತ್ರಿಕೆಯ ಹೆಸರೇನು ?

ಜೀವನ

**118.**

ಕ್ರಿಕೆಟ್ ಮಾಂತ್ರಿಕ ಇ ಎ ಎಸ್ ಪ್ರಸನ್ನರವರು ವೆಸ್ಟ್ ಇಂಡೀಸ್ ಪ್ರವಾಸಕ್ಕೆ ಆಯ್ಕೆಯಾದ ಸಂದರ್ಭದಲ್ಲಿ ಅವರ ತಂದೆಯವರು ಮಗನ ಇಂಜನೀಯರ್ ವಿದ್ಯಾಭ್ಯಾಸಕ್ಕೆ ತೊಡಕಾಗುತ್ತದೆ ಎಂಬ ಕಾರಣದಿಂದ ಪ್ರಸನ್ನ ಅವರನ್ನು ಪ್ರವಾಸಕ್ಕೆ ಕಳುಹಿಸಲು ನಿರಾಕರಿಸಿದಾಗ , ಪ್ರಸನ್ನ ಅವರನ್ನು ಪ್ರವಾಸಕ್ಕೆ ಕಳುಹಿಸುವಂತೆ ಅವರ ತಂದೆಯವರ ಮನವೊಲಿಸಲು ಶ್ರೀ ಎಮ್ ಚಿನ್ನಸ್ವಾಮಿಯವರು ಯಾರನ್ನು ಕೇಳಿಕೊಂಡರು ?

ಜಯಚಾಮರಾಜೇಂದ್ರ ಒಡೆಯರ್

**119.**

'ಕಲೆಯೇ ಕಾಯಕ' ಇದು ಯಾವ ಖ್ಯಾತ ರಂಗಭೂಮಿ ಕಲಾವಿದರ ಆತ್ಮಕಥೆ?

ಗುಬ್ಬಿ ವೀರಣ್ಣ

**120.**

'ಶಂಕರ್ ಗುರು' ಕನ್ನಡದ ಜನಪ್ರಿಯ ಚಲನಚಿತ್ರವನ್ನು ಹಲವಾರು ಇತರ ಭಾರತೀಯ ಭಾಷೆಗಳಲ್ಲಿ ರಿಮೇಕ್ ಮಾಡಲಾಗಿದೆ. ಅದರಲ್ಲಿ ಒಂದು ಭಾಷೆಯವರು ಮಾತ್ರ ಮೂಲ ಕನ್ನಡ ಚಲನ ಚಿತ್ರದ ಎಲ್ಲಾ ಪಾತ್ರಧಾರಿಗಳ ಹೆಸರನ್ನೇ ಆ ಚಲನಚಿತ್ರದಲ್ಲೂ ಸಹ ಬಳಸಿಕೊಂಡಿದ್ದಾರೆ. ಅದು ಯಾವ ಭಾಷೆಯಲ್ಲಿ ತಯಾರಾದ ಚಿತ್ರ ?

ತಮಿಳು